ಸಂಪಾದಕ : ಶಿವಕುಮಾರ್ ಕೆ. ವರ್ಲಕೊಂಡ
PRGI : KNKAN/26/A2919
E-mail: skandagirivani@gmail.com

# ಸ್ಕಂದಗಿರಿ ವಾಣಿ

ಕನ್ನಡ ದಿನಪತ್ರಿಕೆ
₹2/-
Editor : SHIVAKUMAR. K.
M.: 81475 82389 / 9743641515
ಸತ್ಯದ ಧ್ವನಿ

SKANDAGIRI VANI Kannada Daily SATURDAY | October 17, 2026 | Volume 01 | Issue 91 | Pages 4 |

## ಸರ್ವರಿಗೂ ಸಮಬಾಳು ಸಮಪಾಲು ಪರಿಕಲ್ಪನೆ ಮುದ್ದೇನಹಳ್ಳಿಯಲ್ಲಿ ಸಾಕಾರ

## ರಾಜಕಾರಣಿಗಳಿಗೆ ಸದ್ಗುರು ಶ್ರೀಮಧುಸೂದನ ಸಾಯಿ ಪ್ರೇರಣೆ–ಎಚ್.ಡಿ.ಕುಮಾರಸ್ವಾಮಿ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಕ್ಕಬಳ್ಳಾಪುರ:** ರಾಜಕಾರಣಿಗಳ ಭಾಷಣಗಳಿಗೆ ಸೀಮಿತವಾಗಿರುವ ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಪರಿಕಲ್ಪನೆ ಮುದ್ದೇನಹಳ್ಳಿಯಂಥ ಪುಟ್ಟ ಗ್ರಾಮದಲ್ಲಿ ಸಾಕಾರಗೊಳ್ಳುತ್ತಿದೆ. ನಿಸ್ವಾರ್ಥ ಸೇವೆಯ ಮೂಲಕ ಶಿಕ್ಷಣ, ಪೌಷ್ಟಿಕತೆ ಮತ್ತು ಮಾನವೀಯ ಮೌಲ್ಯಗಳ ಪ್ರಸಾರಕ್ಕೆ ಶ್ರಮಿಸುತ್ತಿರುವ ಸದ್ಗುರು ಶ್ರೀ ಮಧುಸೂದನ ಸಾಯಿ ಅವರು ಸರ್ಕಾರಗಳು ಮತ್ತು ರಾಜಕಾರಣಿಗಳಿಗೆ ಪ್ರೇರಣೆಯಾಗಿದ್ದಾರೆ ಎಂದು ಕೇಂದ್ರ ಭಾರಿ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಮುದ್ದೇನಹಳ್ಳಿ ಸತ್ಯ ಸಾಯಿ ಗ್ರಾಮದಲ್ಲಿ ನಡೆಯುತ್ತಿರುವ ನವರಾತ್ರಿ ಉತ್ಸವದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಗ್ರಾಮೀಣ ಭಾಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಜತೆಗೆ ಪೌಷ್ಟಿಕ ಆಹಾರವನ್ನೂ ಒದಗಿಸಬೇಕು ಎಂಬುದು ತಮ್ಮ ಕನಸಾಗಿತ್ತು. ಆದರೆ, ದೀರ್ಘಾವಧಿಯ ಅಧಿಕಾರಾವಕಾಶ ದೊರೆಯದ ಕಾರಣ ಆ ಕನಸನ್ನು ಸಂಪೂರ್ಣವಾಗಿ ಸಾಕಾರಗೊಳಿಸಲು ಸಾಧ್ಯವಾಗಲಿಲ್ಲ. ಸದ್ಗುರು ಶ್ರೀ ಮಧುಸೂದನ ಸಾಯಿ ಅವರು ನಿಸ್ವಾರ್ಥ ಸೇವೆಯ ಮೂಲಕ ಆ ಕನಸನ್ನು ನನಸು ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಒಂದು ಜಗತ್ತು, ಒಂದು ಕುಟುಂಬ ಎಂಬ ಧ್ಯೇಯದೊಂದಿಗೆ ಸದ್ಗುರು ಜಗತ್ತಿನಾದ್ಯಂತ ಮಾನವೀಯ ಮೌಲ್ಯಗಳನ್ನು ಪಸರಿಸುತ್ತಿದ್ದಾರೆ. ಭಗವಾನ್ ಶ್ರೀ ಸತ್ಯ ಸಾಯಿ ಬಾಬಾ ಅವರ ಆಶಯ ಮತ್ತು ಅನುಗ್ರಹದೊಂದಿಗೆ ಮಾನವೀಯ ಮೌಲ್ಯಾಧಾರಿತ ಶಿಕ್ಷಣ ನೀಡಲಾಗುತ್ತಿದೆ. ಲಕ್ಷಾಂತರ ಕುಟುಂಬಗಳ ಪೌಷ್ಟಿಕಾಂಶದ



ಕೊರತೆ ನೀಗಿಸುವ ಕಾರ್ಯ ನಿಜಕ್ಕೂ ಪವಾಡದಂತಿದೆ ಎಂದು ಬಣ್ಣಿಸಿದರು. ಸರ್ಕಾರಿ ಶಾಲೆಗಳ ಸ್ಥಿತಿ ಹಲವು ಕಡೆಗಳಲ್ಲಿ ಕಳವಳಕಾರಿಯಾಗಿರುವ ಸಂದರ್ಭದಲ್ಲಿ, ಎಲ್ಲರಿಗೂ ಸಮಾನ ಶಿಕ್ಷಣ ಒದಗಿಸುವ ಸದ್ಗುರುಗಳ ಪರಿಕಲ್ಪನೆ ಶ್ಲಾಘನೀಯ. ಜಗತ್ತಿನಲ್ಲಿ ಅಸೂಯೆ ಮತ್ತು ಭಿನ್ನಾಭಿಪ್ರಾಯಗಳು ಹೆಚ್ಚುತ್ತಿರುವ ಹೊತ್ತಿನಲ್ಲಿ ಇಡೀ ವಿಶ್ವವನ್ನೇ ಒಂದು ಕುಟುಂಬವಾಗಿ ಕಾಣುವ ವಿಶಾಲ ದೃಷ್ಟಿಕೋನ ಸಾಮಾನ್ಯವಾದುದಲ್ಲ ಎಂದರು. ದೇಶಗಳ ನಡುವೆ ಅನಾರೋಗ್ಯಕರ ಪೈಪೋಟಿ ನಡೆಯುತ್ತಿರುವ ಸಂದರ್ಭದಲ್ಲಿ, ನಿಸ್ವಾರ್ಥ ಸೇವೆಯ ಮೂಲಕ ಜನರನ್ನು ಒಗ್ಗೂಡಿಸುವ ಒನ್ ವರ್ಲ್ಡ್ ಒನ್ ಫ್ಯಾಮಿಲಿ ಮಿಷನ್ ಕಾರ್ಯ ಮಾದರಿಯಾಗಿದೆ. ಇಂತಹ ಸೇವಾ ಕಾರ್ಯಗಳು ಸಮಾಜಕ್ಕೆ ಹೊಸ ದಿಕ್ಕು ತೋರಿಸುತ್ತವೆ ಎಂದು ಹೇಳಿದರು.

ಸಮಾಜ, ಸರ್ಕಾರ, ಸಂಸ್ಥೆಗಳು ಒಗ್ಗೂಡಿದರೆ ಅದ್ಭುತ ಸಾಧನೆ ಸಾಧ್ಯ ಒನ್ ವರ್ಲ್ಡ್ ಒನ್ ಫ್ಯಾಮಿಲಿ ಮಿಷನ್ ಸಂಸ್ಥಾಪಕ ಸದ್ಗುರು ಶ್ರೀ ಮಧುಸೂದನ ಸಾಯಿ ಮಾತನಾಡಿ, ನಮ್ಮಿಂದ ಸಾಧ್ಯವಾಗದ ಕೆಲಸವನ್ನು ನಿಮ್ಮ ಸಂಸ್ಥೆ ಮಾಡುತ್ತಿದೆ ಎಂಬ ಕುಮಾರಸ್ವಾಮಿ ಅವರ ಮಾತು ಅವರ ಔದಾರ್ಯವನ್ನು ತೋರಿಸುತ್ತದೆ. ಈ ಎಲ್ಲ ಸಾಧನೆಗಳ ಹಿಂದೆ ದೇವರ ಅನುಗ್ರಹವಿದೆ ಎಂದರು. ಸಮಾಜ, ಸರ್ಕಾರ ಮತ್ತು ಸೇವಾ ಸಂಸ್ಥೆಗಳು ಪರಸ್ಪರ ಕೈಜೋಡಿಸಿದಾಗ ದೇಶದಲ್ಲಿ ಅನೇಕ ಅದ್ಭುತಗಳನ್ನು ಸೃಷ್ಟಿಸಬಹುದು. ಈ ಮೂರೂ ಶಕ್ತಿಗಳು ಒಗ್ಗೂಡಿದಾಗ ದುರ್ಗೆ, ಲಕ್ಷ್ಮಿ ಮತ್ತು ಸರಸ್ವತಿಯರು ಒಂದೆಡೆ ಸೇರಿದಂತಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಭಾರತೀಯರ ಪರಂಪರೆ ಮತ್ತು ಸಂಸ್ಕೃತಿಯ ಬಗ್ಗೆ ಕೀಳರಿಮೆ ಮೂಡಿಸುವಲ್ಲಿ ಮೆಕಾಲೆ ಶಿಕ್ಷಣ ಪದ್ಧತಿ ಯಶಸ್ವಿಯಾಯಿತು. ಆದರೆ, ಭಾರತೀಯತೆ ಮತ್ತು ನಮ್ಮ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಹೆಮ್ಮೆ ಮೂಡಿಸುವ ಶಿಕ್ಷಣ ನೀಡಲು ತಮ್ಮ ಸಂಸ್ಥೆ ಬದ್ಧವಾಗಿದೆ. ಆಧ್ಯಾತ್ಮಿಕ ಶಿಕ್ಷಣದ ಜತೆಗೆ ಭಾರತೀಯ ಪರಂಪರೆ, ಸಂಸ್ಕೃತಿ ಮತ್ತು ಮೌಲ್ಯಗಳ ಬಗ್ಗೆ ಗೌರವ ಬೆಳೆಸುವ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ ಎಂದು ತಿಳಿಸಿದರು. ಬಳಿಕ ಖ್ಯಾತ ಹಾರ್ಮೋನಿಯಂ ಕಲಾವಿದ ಡಾ. ರವೀಂದ್ರ ಕಟೋಟಿ ಅವರಿಂದ ಅಮೃತಮಾಲಾ ಸಂಗೀತ ಕಾರ್ಯಕ್ರಮ ನಡೆಯಿತು. ಪ್ರಶಾಂತಿ ಬಾಲಮಂದಿರ ಟ್ರಸ್ಟ್ ಅಧ್ಯಕ್ಷ ಬಿ.ಎನ್. ನರಸಿಂಹಮೂರ್ತಿ ಮಾತನಾಡಿದರು.

## ಗೀತಂ ವಿವಿ ಹಾಸ್ಟೆಲ್‌ನಲ್ಲಿ ದುರಂತ 6ನೇ ಮಹಡಿಯಿಂದ ಬಿದ್ದು ಬಿ.ಟೆಕ್ ವಿದ್ಯಾರ್ಥಿನಿ ಸಾವು



**ಸ್ಕಂದಗಿರಿ ವಾಣಿ ಸುದ್ದಿಜಾಲ**

**ದೊಡ್ಡಬಳ್ಳಾಪುರ:** ತಾಲೂಕಿನ ನಾಗದೇನಹಳ್ಳಿ ಸಮೀಪದ ಗೀತಂ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ತಡರಾತ್ರಿ ವಿದ್ಯಾರ್ಥಿನಿಯೊಬ್ಬಳು ಹಾಸ್ಟೆಲ್ ಕಟ್ಟಡದ ಆರನೇ ಮಹಡಿಯಿಂದ ಬಿದ್ದು ಮೃತಪಟ್ಟಿರುವ ಘಟನೆ ವರದಿಯಾಗಿದೆ.

ಮೃತ ವಿದ್ಯಾರ್ಥಿನಿಯನ್ನು ಆಂಧ್ರಪ್ರದೇಶ ಮೂಲದ ವರ್ಷಿತಾ 20 ಎಂದು ಗುರುತಿಸಲಾಗಿದೆ. ಈಕೆ ಗೀತಂ ವಿಶ್ವವಿದ್ಯಾಲಯದಲ್ಲಿ ತೃತೀಯ ವರ್ಷದ ಬಿ.ಟೆಕ್ ವ್ಯಾಸಂಗ ಮಾಡುತ್ತಿದ್ದಳು. ವಿಶ್ವವಿದ್ಯಾಲಯದ ಹಾಸ್ಟೆಲ್ ಕಟ್ಟಡದ ಆರನೇ ಮಹಡಿಯಿಂದ ಬಿದ್ದು ವಿದ್ಯಾರ್ಥಿನಿ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ಆತ್ಮಹತ್ಯೆಯ ಶಂಕೆ ವ್ಯಕ್ತವಾಗಿದ್ದು,

ಸಾವಿಗೆ ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲ. ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಸ್ಥಳೀಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದೆ. ವಿದ್ಯಾರ್ಥಿನಿಯ ಸಾವಿನ ಹಿಂದಿನ ಕಾರಣವೇನು ಎಂಬುದರ ಕುರಿತು ಪೊಲೀಸರು ವಿವಿಧ ಆಯಾಮಗಳಲ್ಲಿ ತನಿಖೆ ಕೈಗೊಂಡಿದ್ದಾರೆ. ಮೃತಳ ಕುಟುಂಬಸ್ಥರಿಗೂ ಮಾಹಿತಿ ನೀಡಲಾಗಿದೆ. ಮರಣೋತ್ತರ ಪರೀಕ್ಷೆಯ ವರದಿ ಹಾಗೂ ಪೊಲೀಸ್ ತನಿಖೆಯ ಬಳಿಕವೇ ಸಾವಿನ ನಿಖರ ಕಾರಣ ತಿಳಿದುಬರಬೇಕಿದೆ.

## ಮೈಸೂರು ದಸರಾ ಕವಿಗೋಷ್ಠಿಗೆ ಪ್ರಮೀಳಾ ಮಹಾದೇವ್ ಆಯ್ಕೆ



**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಭಾಗ್ಯನಗರ:** ಕನ್ನಡ ಸಾಹಿತ್ಯ ಲೋಕದಲ್ಲಿ ಎರಡೂವರೆ ದಶಕಗಳಿಂದ ಕ್ರಿಯಾಶೀಲ ಕವಯಿತ್ರಿಯಾಗಿ ಸಿರಿ ಮಲ್ಲಿಗೆ ಸಾಲು ದೀಪಗಳು ಕವನಸಂಕಲನಗಳನ್ನು ಲೋಕಾರ್ಪಣೆ ಗೊಳಿಸಿ ಹೆಸರಾಗಿರುವ ತಾಲ್ಲೂಕಿನ ಆದರ್ಶ ಶಾಲೆಯ ಶಿಕ್ಷಕಿ ಶ್ರೀಮತಿ ಬಿ.ಎಂ.ಪ್ರಮೀಳ ಮಹದೇವ್ ಅವರು ಇದೀಗ ವಿಶ್ವವಿಖ್ಯಾತ ಮೈಸೂರು ದಸರಾ ಪ್ರಧಾನ ಕವಿಗೋಷ್ಠಿಗೆ ಆಯ್ಕೆಯಾಗಿದ್ದಾರೆ.

ತಾಲ್ಲೂಕು ಮಟ್ಟದ, ಜಿಲ್ಲಾ ಮಟ್ಟದ, ರಾಜ್ಯ ಮಟ್ಟದ ಸಾಹಿತ್ಯ ಸಮ್ಮೇಳನಗಳ ಕವಿಗೋಷ್ಠಿಗಳಲ್ಲಿ ನೂರಾರು ಬಾರಿ ಭಾಗವಹಿಸಿರುವ ಇವರಿಗೆ ನಾಡಿನ ಪ್ರತಿಷ್ಠಿತ ಸಂಘ ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕಾರಗಳು ಸಂದಿವೆ. ಇವರ ಲೇಖನಗಳು, ಕವನಗಳು ರಾಜ್ಯಮಟ್ಟದ ಪತ್ರಿಕೆಗಳಲ್ಲಿ ಪ್ರಕಟಗೊಂಡು ಸಹೃದಯರ ಪ್ರಶಂಸೆಗೆ ಪಾತ್ರವಾಗಿವೆ.

ಆದರ್ಶಶಿಕ್ಷಕಿಯಾಗಿ ಪ್ರಾಂಜಲ ಸೇವೆ ಸಲ್ಲಿಸುತ್ತಿರುವ ಇವರಿಗೆ ಚಿಕ್ಕಬಳ್ಳಾಪುರ ಜಿಲ್ಲೆಯ ಅತ್ಯುತ್ತಮ ಜಿಲ್ಲಾ ಶಿಕ್ಷಕ ಪ್ರಶಸ್ತಿ ಮತ್ತು ರಾಜ್ಯೋತ್ಸವ ಪ್ರಶಸ್ತಿಗಳು ಪುರಸ್ಕಾರವಾಗಿವೆ. ಜನಪ್ರಿಯ ಜಾನಪದ ಹಾಡುಗಾರ್ತಿಯಾಗಿಯೂ ಅಭಿನಂದಿತರಾಗಿರುವ ಇವರು ರಾಜ್ಯಮಟ್ಟದ ಜಾನಪದ ಸಮ್ಮೇಳನಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆ ಮೆರೆದಿದ್ದಾರೆ.

ಇದೀಗ ಅಗ್ನಿಶಿಖೆ ಹಾಗು ಜಾನಪದ ದೀವಿಗೆ ಪುಸ್ತಕಗಳನ್ನು ಹೊರತರುತ್ತಿರುವ ಈ ಸುಸಂದರ್ಭದಲ್ಲಿ ಶ್ರೀಮತಿ ಬಿ.ಎಂ.ಪ್ರಮೀಳ ಮಹದೇವ್ ಅವರು ವಿಶ್ವವಿಖ್ಯಾತ ಮೈಸೂರು ದಸರಾ ಪ್ರಧಾನ ಕವಿಗೋಷ್ಠಿಯಲ್ಲಿ ಕವಿತೆ ವಾಚಿಸುವ ಅವಕಾಶ ತಮ್ಮದಾಗಿಸಿಕೊಂಡಿದ್ದಾರೆ. ಈ ಸುಸಂದರ್ಭದಲ್ಲಿ ಇವರಿಗೆ ಕನ್ನಡ ಸಾಹಿತ್ಯ ವಲಯದ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸಿದೆ.

## ರಾಷ್ಟ್ರೀಯ ವಿಚಾರ ಸಂಕಿರಣ ಸಮ್ಮೇಳನ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಕ್ಕಬಳ್ಳಾಪುರ:** ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ಸುಸ್ಥಿರ ಅಭಿವೃದ್ಧಿಗಾಗಿ ವಿರಳ ಖನಿಜ ಮೌಲ್ಯ ಸರಪಳಿಯ ಭದ್ರತೆ ವಿಷಯದ ಮೇಲೆ 2 ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ಸಮ್ಮೇಳನ ನ.4 ಮತ್ತು 5 ರಂದು ಅಕಾಡೆಮಿಯ ಕಚೇರಿಯಲ್ಲಿ ಆಯೋಜಿಸಲಾಗುತ್ತಿದೆ. ಈ ಸಮ್ಮೇಳನದಲ್ಲಿ ವಿವಿಧ ಪ್ರತಿಷ್ಠಿತ ಸಂಸ್ಥೆಗಳ ಹೆಸರಾಂತ ವಿಜ್ಞಾನಿಗಳು ತಾಂತ್ರಿಕ ಉಪನ್ಯಾಸಗಳನ್ನು ನೀಡಲಿದ್ದಾರೆ. ಆಸಕ್ತರು ಅ.30ರೊಳಗಾಗಿ ಮೂಲಕ ನೋಂದಾಯಿಸಿಕೊಳ್ಳಬಹುದು. ಮಾಹಿತಿಗಾಗಿ ಅಕಾಡೆಮಿಯ ಅಧಿಕಾರಿಗಳ ಮೊ:9320767819, 9743084194ಗೆ ಸಂಪರ್ಕಿಸಬಹುದು ಅಥವಾ ಅಕಾಡೆಮಿಯ ವೆಬ್ ಸೈಟ್ ನಲ್ಲಿ ವೀಕ್ಷಿಸಬಹುದು ಎಂದು ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಆರ್.ಆನಂದ್ ತಿಳಿಸಿದ್ದಾರೆ.

## ಕಳೆನಾಶಕ ಸಿಂಪಡಿಸಿ ಟೊಮೇಟೊ ಬೆಳೆ ನಾಶ

## ಐದು ಲಕ್ಷಕ್ಕೂ ಅಧಿಕ ನಷ್ಟ ಪೊಲೀಸರಿಗೆ ದೂರು ನೀಡಿದ ರೈತ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಂತಾಮಣಿ :** ಲಕ್ಷಾಂತರ ರೂಪಾಯಿ ಸಾಲಸೋಲ ಮಾಡಿ ಎರಡು ಎಕರೆ ಜಮೀನಿನಲ್ಲಿ ಉತ್ತಮವಾಗಿ ಬೆಳೆದಿದ್ದ ಟೊಮೇಟೊ ಬೆಳೆಗೆ ಕಿಡಿಗೇಡಿಗಳು ಕಳೆನಾಶಕ ಸಿಂಪಡಿಸಿದ ಪರಿಣಾಮ ಬೆಳೆ ಸಂಪೂರ್ಣವಾಗಿ ಸುಟ್ಟು ಕರಕಲಾಗಿದ್ದು, ರೈತನಿಗೆ ಐದು ಲಕ್ಷ ರೂಪಾಯಿಗೂ ಅಧಿಕ ನಷ್ಟ ಉಂಟಾಗಿರುವ ಘಟನೆ ಚಿಂತಾಮಣಿ ತಾಲೂಕು ಊಲವಾಡಿ ಗ್ರಾಮದ ಬಳಿ ನಡೆದಿದೆ.

ಊಲವಾಡಿ ಗ್ರಾಮದ ಪರಿಶಿಷ್ಟ ಜಾತಿಗೆ ಸೇರಿದ ಎಲ್.ನಾಗರಾಜ್ ಎಂಬ ರೈತ, ಅದೇ ಗ್ರಾಮದ ರಾಮಾಂಜಿನಪ್ಪ ಅವರಿಗೆ ಸೇರಿದ ಎರಡು ಎಕರೆ ಜಮೀನನ್ನು ಲೀಸ್‌ಗೆ ಪಡೆದುಕೊಂಡು, ಸಾಲಸೋಲ ಮಾಡಿ ಐದು ಲಕ್ಷ ರೂಪಾಯಿಗೂ ಅಧಿಕ ಬಂಡವಾಳ ಹೂಡಿ ಟೊಮೇಟೊ ಬೆಳೆದಿದ್ದರು. ಸುಮಾರು 35 ದಿನಗಳಿಂದ ಉತ್ತಮವಾಗಿ ಬೆಳೆದು ಬಂದಿದ್ದ ಟೊಮೇಟೊ ಗಿಡಗಳು ಹೂವು ಮತ್ತು ಕಾಯಿಗಳನ್ನು ಬಿಡುವ ಹಂತದಲ್ಲಿದ್ದವು. ಆದರೆ, ದುಷ್ಕರ್ಮಿಗಳು ಕಳೆನಾಶಕ ಸಿಂಪಡಿಸಿದ ಪರಿಣಾಮ ಸಂಪೂರ್ಣ ಬೆಳೆ ಹಾನಿಗೀಡಾಗಿದೆ ಎಂದು ರೈತ ಅಳಲು



ತೋಡಿಕೊಂಡಿದ್ದಾರೆ.

ರೈತ ನಾಗರಾಜ್ ಅವರ ಹೇಳಿಕೆಯ ಪ್ರಕಾರ, ಜಮೀನಿನ ಮಾಲೀಕ ರಾಮಾಂಜಿನಪ್ಪ ಹಾಗೂ ಪಕ್ಕದ ಜಮೀನಿನ ಮಾಲೀಕ ಆದಿನಾರಾಯಣಪ್ಪ ಅವರ ನಡುವೆ ಜಮೀನಿನ ವಿಚಾರವಾಗಿ ವಿವಾದ ಉಂಟಾಗಿತ್ತು. ಈ ಸಂಬಂಧ ನ್ಯಾಯಾಲಯದಲ್ಲಿ ವಿಚಾರಣೆ ನಡೆದು, ಜಮೀನು ರಾಮಾಂಜಿನಪ್ಪ ಅವರ ಪರವಾಗಿ ಆದೇಶವಾಗಿತ್ತು ಎನ್ನಲಾಗಿದೆ.

ಇದೇ ವಿಚಾರದ ಹಿನ್ನೆಲೆಯಲ್ಲಿ ಅಕ್ಟೋಬರ್ 12ರ ರಾತ್ರಿ ಆದಿನಾರಾಯಣಪ್ಪ ಅವರು ನಾಲ್ಕೈದು ಜನರೊಂದಿಗೆ ಸೇರಿಕೊಂಡು ಟೊಮೇಟೊ ತೋಟಕ್ಕೆ ಕಳೆನಾಶಕ ಸಿಂಪಡಿಸಿ ಪರಾರಿಯಾಗಿದ್ದಾರೆ ಎಂದು ರೈತ ಎಲ್. ನಾಗರಾಜ್ ಆರೋಪಿಸಿದ್ದಾರೆ.

ಆದರೆ, ಈ ಆರೋಪಗಳು ತನಿಖೆಯಿಂದ ದೃಢಪಡಬೇಕಿದೆ. ಕೈಗೆ ಬಂದ ತುತ್ತು ಬಾಯಿಗೆ ಬರದಂತಾದ ರೈತ ಸಾಲ ಮಾಡಿ, ಅಪಾರ ಶ್ರಮವಹಿಸಿ ಬೆಳೆಸಿದ್ದ ಟೊಮೇಟೊ ಬೆಳೆ ಸಂಪೂರ್ಣವಾಗಿ ನಾಶವಾಗಿರುವುದರಿಂದ ರೈತ ನಾಗರಾಜ್ ಅವರಿಗೆ ಐದು ಲಕ್ಷ ರೂಪಾಯಿಗೂ ಅಧಿಕ ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ.

ಬೆಳೆ ಕೈಸೇರುವ ನಿರೀಕ್ಷೆಯಲ್ಲಿದ್ದ ರೈತ ಇದೀಗ ದಿಕ್ಕು ತೋಚದಂತಾಗಿದ್ದು, ತಮಗೆ ಸೂಕ್ತ ಪರಿಹಾರ ಒದಗಿಸುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಪೊಲೀಸರಿಂದ ಸ್ಥಳ ಪರಿಶೀಲನೆ ಘಟನೆಗೆ ಸಂಬಂಧಿಸಿದಂತೆ ರೈತ ನಾಗರಾಜ್ ಅವರು ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ದೂರಿನ ಹಿನ್ನೆಲೆಯಲ್ಲಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಒಟ್ಟಿನಲ್ಲಿ, ಕಷ್ಟಪಟ್ಟು ಬೆಳೆದಿದ್ದ ಟೊಮೇಟೊ ಬೆಳೆ ಕಳೆನಾಶಕ ಸಿಂಪಡಣೆಯಿಂದ ನಾಶವಾಗಿದೆ ಎಂಬ ಆರೋಪ ರೈತನನ್ನು ಸಂಕಷ್ಟಕ್ಕೆ ದೂಡಿದೆ. ಪ್ರಕರಣದ ಕುರಿತು ಪೊಲೀಸರು ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರು ಕಂಡುಬಂದಲ್ಲಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ಬೆಳೆ ನಷ್ಟದಿಂದ ಸಂಕಷ್ಟಕ್ಕೀಡಾಗಿರುವ ರೈತನಿಗೆ ಸರ್ಕಾರ ಪರಿಹಾರ ಒದಗಿಸಬೇಕು ಎಂಬುದು ರೈತನ ಮನವಿಯಾಗಿದೆ.

## ಶ್ರೀಕನ್ಯಕಾಪರಮೇಶ್ವರಿ ದೇವಾಲಯದಲ್ಲಿ ದಶಾವತಾರ ದರ್ಶನ



**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಗೌರಿಬಿದನೂರು:** ಶರನ್ನವರಾತ್ರಿಯ ಪ್ರಯುಕ್ತ ನಗರದ ಶ್ರೀಕನ್ಯಕಾಪರಮೇಶ್ವರಿ ದೇವಾಲಯದಲ್ಲಿ ಹನ್ನೊಂದು ದಿನಗಳ ಕಾಲ ವಿಶೇಷ ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ವಾಸವಿ ಮಾತೆಗೆ ಅನ್ನಪೂರ್ಣೇಶ್ವರಿ ಅಲಂಕಾರದೊಂದಿಗೆ ಪ್ರಾರಂಭವಾದ ಉತ್ಸವವು ಪ್ರತಿ ದಿನ ವಿವಿಧ ಅಲಂಕಾರಗಳ ಮೂಲಕ ಸಾಗಿದೆ. ಅಮ್ಮನವರಿಗೆ ವಿವಿಧ ಅಲಂಕಾರ ಮಾಡಿ ಕಣ್ತುಂಬಿಕೊಳ್ಳುವ ಜೊತೆಗೆ ವಿಶೇಷ ಆಕರ್ಷಣೆಯಾಗಿ ದಶಾವತಾರಗಳ ಪ್ರದರ್ಶನವನ್ನು ಏರ್ಪಡಿಸಲಾಗಿದೆ ಎಂದು ಆರ್ಯವೈಶ್ಯ ಮಂಡಲಿ ಮುಖಂಡ ಬಿ.ಆರ್.ಶ್ರೀನಿವಾಸಮೂರ್ತಿ ತಿಳಿಸಿದರು.

ಕಳೆದ 54 ವರ್ಷಗಳಿಂದ ಶರನ್ನವರಾತ್ರಿ ಉತ್ಸವವನ್ನು ಪ್ರತಿವರ್ಷ ಶ್ರದ್ಧಭಕ್ತಿಯಿಂದ ಆರ್ಯವೈಶ್ಯ ಮಂಡಲಿಯು ವಾಸವಿ ಸಮುದಾಯದ ಮಹಿಳಾ ಸಂಘ, ವಾಸವಿ ಯುವತಿಯರ ಸಂಘ ಮತ್ತು ಯುವಕರ ಸಂಘಗಳ ಸಹಕಾರದೊಂದಿಗೆ ಏರ್ಪಡಿಸಿಕೊಂಡು ಬಂದಿದೆ ಎಂದು ಆರ್ಯ ವೈಶ್ಯ ಮಂಡಲಿಯ ಮುಖಂಡ ಎ.ಎನ್.ರಾಜಣ್ಣ ತಿಳಿಸಿದರು.

ನಿತ್ಯ ಬೆಳಗ್ಗೆ ಮತ್ತು ಸಂಜೆ ವಿವಿಧ ಬಗೆಯ ಪೂಜಾ ಕಾರ್ಯಗಳು, ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗವನ್ನು ಏರ್ಪಡಿಸಲಾಗಿದೆ. ವಾಸವಿ ಸಮುದಾಯದ ಜೊತೆಗೆ ಎಲ್ಲಾ ಸಮುದಾಯದ ಜನರು ಆಗಮಿಸಿ ಅಮ್ಮನವರ ದರ್ಶನ ಪಡೆದು ಕೃತಕೃತ್ಯರಾಗುತ್ತಿದ್ದಾರೆ. ಇದು ಸರ್ವ ಜನಾಂಗದ ಆಲಯವಾಗಿದೆ ಎಂದರು. ಇಸ್ತೂರಿ ಸಂಪಂಗಿ, ಕಾಪರ್ತಿ ಸೂರಣ್ಣ ಇದ್ದರು.

## ಗುಡಿಬಂಡೆಯಲ್ಲಿ 300ಕ್ಕೂ ಹೆಚ್ಚು ವಿದ್ಯಾರ್ಥಿಗಳಿಂದ ಕಬಡ್ಡಿ ಪಂದ್ಯಾವಳಿ

## ಕ್ರೀಡಾಂಗಣ ನಿರ್ಮಾಣಕ್ಕೆ ಅನುದಾನ ಬಿಡುಗಡೆಗೆ ಒತ್ತಾಯ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಗುಡಿಬಂಡೆ:** ಪಟ್ಟಣದ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಜಿಲ್ಲಾ ಮಟ್ಟದ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳ ಕಬಡ್ಡಿ ಪಂದ್ಯಾವಳಿಯನ್ನು ಆಯೋಜಿಸಲಾಗಿದ್ದು, ಚಿಕ್ಕಬಳ್ಳಾಪುರ ಜಿಲ್ಲೆಯ ಆರು ತಾಲೂಕುಗಳ ಸುಮಾರು 300 ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ ಎಂದು ಟಿಪಿಒ ಹನುಮಂತರಾಯಪ್ಪ ಹೇಳಿದರು.

ಗುಡಿಬಂಡೆ ತಾಲೂಕಿನಲ್ಲಿ ಎರಡನೇ ಬಾರಿಗೆ ಜಿಲ್ಲಾ ಮಟ್ಟದ ಕಬಡ್ಡಿ ಪಂದ್ಯಾವಳಿ ಆಯೋಜಿಸಿರುವುದು ಸಂತೋಷದ ವಿಷಯವಾಗಿದೆ. ಜಿಲ್ಲೆಯ ಆರು ತಾಲೂಕುಗಳಿಂದ ಆಗಮಿಸಿರುವ ಬಾಲಕರು ಮತ್ತು ಬಾಲಕಿಯರು ಕ್ರೀಡಾಸ್ಫೂರ್ತಿಯಿಂದ ಪಂದ್ಯಾವಳಿಯಲ್ಲಿ ಭಾಗವಹಿಸಬೇಕು. ಕ್ರೀಡಾಕೂಟದಲ್ಲಿ ವಿಜೇತರಾಗುವ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿಗಳು ವಿಭಾಗ ಮಟ್ಟಕ್ಕೆ



ಆಯ್ಕೆಯಾಗಲಿದ್ದಾರೆ. ಎಲ್ಲ ಕ್ರೀಡಾಪಟುಗಳಿಗೂ ಶುಭವಾಗಲಿ ಎಂದು ಅವರು ಹಾರೈಸಿದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಾಲಾಜಿ ಮಾತನಾಡಿ, ಗುಡಿಬಂಡೆ ತಾಲೂಕು ಹಲವು ವರ್ಷಗಳಿಂದ ಕ್ರೀಡಾ ಕ್ಷೇತ್ರದಲ್ಲಿ ತನ್ನದೇ ಆದ ಹೆಸರನ್ನು ಹೊಂದಿದೆ. ಈ ಹಿಂದೆ ಅನೇಕ ಜಿಲ್ಲಾ ಮಟ್ಟದ ಕ್ರೀಡಾಕೂಟಗಳನ್ನು ಯಶಸ್ವಿಯಾಗಿ ಆಯೋಜಿಸಲಾಗಿದೆ. ಇಲ್ಲಿ ನುರಿತ ದೈಹಿಕ ಶಿಕ್ಷಕರಿದ್ದು, ಕ್ರೀಡಾಕೂಟಗಳನ್ನು ಉತ್ತಮವಾಗಿ ನಿರ್ವಹಿಸುತ್ತಿದ್ದಾರೆ. ಜಿಲ್ಲೆಯ ವಿವಿಧ ತಾಲೂಕುಗಳಿಂದ ಆಗಮಿಸಿರುವ ಕ್ರೀಡಾಪಟುಗಳನ್ನು ತಾಲೂಕಿನ ಶಿಕ್ಷಕರು, ನೌಕರರು ಹಾಗೂ ಸಾರ್ವಜನಿಕರ ಪರವಾಗಿ ಸ್ವಾಗತಿಸುತ್ತೇನೆ ಎಂದರು.

ಗುಡಿಬಂಡೆ ತಾಲೂಕಿನಲ್ಲಿ ಸುಸಜ್ಜಿತ ಕ್ರೀಡಾಂಗಣದ ಅಗತ್ಯವಿದೆ. ಈಗಾಗಲೇ ಕ್ರೀಡಾಂಗಣಕ್ಕಾಗಿ ನಾಲ್ಕರಿಂದ ಐದು ಎಕರೆ ಜಮೀನು ಮೀಸಲಿಡಲಾಗಿದೆ. ಆದರೆ, ಸೂಕ್ತ ಮೈದಾನವಿಲ್ಲದೆ ಕ್ರೀಡಾಪಟುಗಳು ತೊಂದರೆ ಅನುಭವಿಸುತ್ತಿದ್ದಾರೆ. ಹಿಂದೆ ಗುಡಿಬಂಡೆ ತಾಲೂಕು ಕ್ರೀಡಾ ಕ್ಷೇತ್ರದಲ್ಲಿ ಹೆಸರು ಗಳಿಸಿತ್ತು. ಆದ್ದರಿಂದ ಶಾಸಕರೊಂದಿಗೆ ಸಾರ್ವಜನಿಕರು, ಶಿಕ್ಷಕರು ಹಾಗೂ ಕ್ರೀಡಾಭಿಮಾನಿಗಳೊಂದಿಗೆ ಚರ್ಚಿಸಿ, ಅಗತ್ಯ ಅನುದಾನ ಬಿಡುಗಡೆ ಮಾಡಿಸಿ, ಶೀಘ್ರ ಕ್ರೀಡಾಂಗಣ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಬಾಲಾಜಿ ಮನವಿ ಮಾಡಿದರು.

ಈ ಸಂದರ್ಭದಲ್ಲಿ ದೈಹಿಕ ಶಿಕ್ಷಕರು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಹಾಜರಿದ್ದರು.

# ಹೆಣ್ಣು ಭ್ರೂಣ ಹತ್ಯೆ ಕಾನೂನುಬಾಹಿರ ಅಪರಾಧ: ನ್ಯಾಯಾಧೀಶ ಈಶ್ವರ್



ಕೊಳ್ಳೇಗಾಲ.ಅ.16.ಹೆಣ್ಣು ಮಕ್ಕಳ ಹಕ್ಕುಗಳು, ಶಿಕ್ಷಣ, ಆರೋಗ್ಯ ಸುರಕ್ಷತೆ ಮತ್ತು ಸಮಾನ ಅವಕಾಶಗಳ ಬಗ್ಗೆ ಜಾಗೃತಿಯನ್ನು ಮೂಡಿಸುತ್ತಾ, ಹೆಣ್ಣು ಭ್ರೂಣ ಹತ್ಯೆ ಮಾಡುವುದು ಕಾನೂನಿನ ಪ್ರಕಾರ ಅಪರಾಧ ಎಂದು

ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರಾದ ಶ್ರೀ ಈಶ್ವರ್ ರವರು ತಿಳಿಸಿದರು.

ಕೊಳ್ಳೆಗಾಲ ಪಟ್ಟಣದ ನಿಸರ್ಗ ಇನ್ಸಿಟ್ಯೂಟ್ ಆಫ್ ಎಜುಕೇಶನ್ ವತಿಯಿಂದ ಸಿದ್ದಯ್ಯನಪುರದಲ್ಲಿರುವ ಸೆವೆಂತ್ ಡೇ ಅಡ್ವೆಂಟಿಸ್ಟ್ ವಾಕ್ ಮತ್ತು ಶ್ರವಣ ವಸತಿ ಶಾಲೆಯಲ್ಲಿ ಸಮುದಾಯ ಜೀವನ ತರಬೇತಿ ಶಿಬಿರವನ್ನು ಮತ್ತು ಮಹಿಳಾ ಸಬಲೀಕರಣ ಹಾಗೂ ಅಂತರಾಷ್ಟ್ರೀಯ ಹೆಣ್ಣು ಮಗುವಿನ ದಿನ ಎಂಬ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು ಮಹಿಳಾ ಸಬಲೀಕರಣ ಮತ್ತು ಅಂತರಾಷ್ಟ್ರೀಯ ಹೆಣ್ಣು ಮಗುವಿನ ದಿನ ಬಗ್ಗೆ ಮಾತನಾಡುತ್ತಾ ಹೆಣ್ಣು ಮಕ್ಕಳ ಹಕ್ಕುಗಳು, ಶಿಕ್ಷಣ, ಆರೋಗ್ಯ ಸುರಕ್ಷತೆ ಮತ್ತು ಸಮಾನ ಅವಕಾಶಗಳ ಬಗ್ಗೆ ಜಾಗೃತಿಯನ್ನು ಮೂಡಿಸುತ್ತಾ, ಹೆಣ್ಣು ಭ್ರೂಣ ಹತ್ಯೆ ಮಾಡುವುದು ಕಾನೂನಿನ ಪ್ರಕಾರ ಅಪರಾಧ ಗಂಡು ಮತ್ತು ಹೆಣ್ಣು ಮಕ್ಕಳ ನಡುವೆ ಸಮಾನತೆಯನ್ನು ಸ್ಥಾಪಿಸುವುದು ಒಳ್ಳೆಯದು ಎಂದು ತಿಳಿಸಿದರು

ಬಾಲ್ಯ ವಿವಾಹವನ್ನು ನಿರ್ಮೂಲನೆ ಮಾಡುವುದು, ಹೆಣ್ಣು ಮಕ್ಕಳ ಮೇಲೆ ನಡೆಯುವ ಶೋಷಣೆ ಮತ್ತು ದೌರ್ಜನ್ಯಗಳನ್ನು ತಡೆಯಲು ಇರುವ ಕಾನೂನುಗಳನ್ನು ಹೆಣ್ಣು ಮಕ್ಕಳಿಗೆ ಸುರಕ್ಷಿತ ಮತ್ತು ಗೌರವಯುತ ಜೀವನವನ್ನು ಖಚಿತಪಡಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ತಿಳಿಸುತ್ತಾ ಸಮಾಜದಲ್ಲಿ ಬೇರೂರಿರುವ ಲಿಂಗ ತಾರತಮ್ಯ ಮತ್ತು ಮೂಢನಂಬಿಕೆಗಳನ್ನು ನಿವಾರಿಸಿ ಹೆಣ್ಣು ಮನೆಯ ಬೆಳಕು ಮಾತ್ರವಲ್ಲ ಸಮಾಜದ ಭವಿಷ್ಯವನ್ನು ಬೆಳಗುವ ಜ್ಞಾನದ ಜ್ಯೋತಿ ಎಂದು ತಿಳಿಸಿದರು

ಹೆಣ್ಣು ಮಗುವಿನ ಅಭಿಪ್ರಾಯಗಳನ್ನು ಗೌರವಿಸಿ, ಅವಳ ಹಕ್ಕುಗಳನ್ನು ಗೌರವಿಸಿ, ಸಾಧನೆಗೆ ಸಮಾನವಾದ ಅವಕಾಶ ನೀಡಿ ಸುಸಂಸ್ಕೃತ ರಾಷ್ಟ್ರ ಮತ್ತು ನಾಗರಿಕ ಸಮಾಜವನ್ನು ಸೃಷ್ಟಿಯಾಗಬೇಕಾದರೆ ಹೆಣ್ಣು ಮಕ್ಕಳನ್ನು ಗೌರವಿಸಿದಾಗ ಮಾತ್ರ ಸಾಧ್ಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಿದ್ದರಾಜು.ಎಲ್ ಮಕ್ಕಳ ಸಹಾಯವಾಣಿ ಜಿಲ್ಲಾ ಸಂಯೋಜಕರು ಚಾಮರಾಜನಗರ ರವರು ಮಕ್ಕಳ ಹಕ್ಕುಗಳ ರಕ್ಷಣೆ ಬಗ್ಗೆ ಮಾತನಾಡುತ್ತಾ ಎಲ್ಲಾ ಮಕ್ಕಳಿಗೆ ಶಿಕ್ಷಣ ನೀಡುವುದು ಕಡ್ಡಾಯ 18 ವರ್ಷದ ತನಕ ಬಾಲಕಾರ್ಮಿಕರನ್ನಾಗಿ ಬಳಸಿಕೊಳ್ಳುವಂತಿಲ್ಲ, ಬಾಲ್ಯ ವಿವಾಹವನ್ನು ಮಾಡುವಂತಿಲ್ಲ, ಮಕ್ಕಳಿಗೆ ಬೆಳೆಯುವ, ಕಲಿಯುವ ಮತ್ತು ಗೌರವದಿಂದ ಬದುಕುವ ಹಕ್ಕಿದೆ ಹಾಗಾಗಿ ಮಕ್ಕಳ ಹಕ್ಕನ್ನು ಗೌರವಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ನಿಸರ್ಗ ಇನ್ಸಿಟ್ಯೂಟ್ ಆಫ್ ಎಜುಕೇಶನ್ ಪ್ರಾಂಶುಪಾಲರು ಹಾಗೂ ಸಮುದಾಯ ಜೀವನ ತರಬೇತಿ ಶಿಬಿರದ ನಿರ್ದೇಶಕರಾದಾಗ ಡಾ. ಎಂ ಚನ್ನಶೆಟ್ಟಿ ಮತ್ತು ಸಮುದಾಯ ಜೀವನ ತರಬೇತಿ ಶಿಬಿರದ ಸಂಯೋಜಕರಾದ ಶ್ರೀಮತಿ ಶಿವಮ್ಮ. ಎಸ್ ರವರು ಶಿಬಿರಾಧಿಕಾರಿಗಳು ಮತ್ತು ಶಿಬಿರಾರ್ಥಿಗಳು ಭಾಗವಹಿಸಿದ್ದರು.

# ನಾನು ಜೆಡಿಎಸ್ ಪಕ್ಷ ಬಿಡಲ್ಲ ಆದರೆ ಶಾಸಕ ಹೆಚ್.ಟಿ ಮಂಜು ಜೊತೆ ಜೀವ ಇರೋವರೆಗೂ ಹೊಂದಾಣಿಕೆ ಹೋಗಲ್ಲ : ಮನ್ಮುಲ್ ಡಾಲು ರವಿ ಶಪಥ

ಕೆ.ಆರ್.ಪೇಟೆ : ತಾಲ್ಲೂಕಿನ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ರಾಜಕೀಯ ವಿವಾದಕ್ಕೆ ಎಳೆದು ತರಬಾರದು. ನಾವು ತಾಲೂಕಿನ ಯಾವುದೇ ಡೇರಿಗೆ ಅನ್ಯಾಯ ಮಾಡಿಲ್ಲ. ಅನ್ಯಾಯವಾಗಿದ್ದರೆ ದಾಖಲೆಗಳ ಸಹಿತ ಸಾಬೀತುಪಡಿಸಿ. ಕೇವಲ ರಾಜಕೀಯ ಟೀಕೆಗಾಗಿ ನನ್ನನ್ನು ಅವಾಚ್ಯ ಶಬ್ದಗಳಿಂದ ತಮ್ಮ ಬೆಂಬಲಿಗರಿಂದ ಟೀಕಿಸುವುದು ಶಾಸಕರ ಸ್ಥಾನಕ್ಕೆ ಶೋಭೆ ತರುವುದಿಲ್ಲ. ಇದು ನಿಲ್ಲದಿದ್ದರೆ ನಾವೂ ಸಹ ಅದೇ ದಾಟಿಯಲ್ಲಿ ಉತ್ತರ ನೀಡಬೇಕಾಗುತ್ತದೆ ಎಂದು ಮನ್‌ಮುಲ್ ನಿರ್ದೇಶಕ ಡಾಲುರವಿ, ಶಾಸಕ ಎಚ್.ಟಿ.ಮಂಜು ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಕೆ.ಆರ್.ಪೇಟೆ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಹಾಲು ಉತ್ಪಾದಕರು ಹಾಗೂ ತಮ್ಮ ಬೆಂಬಲಿಗರ ಸಭೆಯಲ್ಲಿ ಮಾತನಾಡಿದ ಅವರು ಮೊನ್ನೆ ಹಾಲು ಶಿಥಲೀಕರಣದ ಮುಂದೆ ಜೆಡಿಎಸ್ ಪ್ರತಿಭಟನೆಯಲ್ಲಿ ಜೆಡಿಎಸ್ ಮುಖಂಡರು ಆರೋಪಿಸಿದ್ದ ವಿಚಾರಗಳಿಗೆ ಸೂಕ್ತ ದಾಖಲೆ ಪ್ರದರ್ಶನ ಮಾಡಿ ಮಾತನಾಡಿದರು.

ಹಿಂದೆ ಶಾಸಕರೇ ಮನ್‌ಮುಲ್ ನಿರ್ದೇಶಕರಾಗಿದ್ದ ವೇಳೆ ಎಲ್ಲರೂ ಸೌಹಾರ್ದತೆಯಿಂದ ಕೆಲಸ ಮಾಡಿರಲಿಲ್ಲವೇ? ತಾಲೂಕಿನ ಎಲ್ಲ ಹಾಲು ಉತ್ಪಾದಕರ ಸಹಕಾರ ಸಂಘಗಳು ಹಿಂದೆ ಸೌಹಾರ್ದತೆಯಿಂದ ಕಾರ್ಯನಿರ್ವಹಿಸುತ್ತಿದ್ದವು. ಆಗ ಡೇರಿಗಳ ವಿಚಾರದಲ್ಲಿ ಇಷ್ಟೊಂದು ರಾಜಕೀಯ ಸಂಘರ್ಷಗಳಿರಲಿಲ್ಲ. ನಾನು ಕಾಂಗ್ರೆಸ್‌ನಿಂದ, ನೀವು ಜೆಡಿಎಸ್‌ನಿಂದ ನಿರ್ದೇಶಕರಾಗಿದ್ದಾಗ ಯಾವ ಊರಿನ ಡೇರಿಯಲ್ಲಿ ಇಂತಹ ಸಮಸ್ಯೆ ಉಂಟಾಗಿತ್ತು? ಆಗಲೂ ಕ್ಷೇತ್ರದಲ್ಲಿ ಶಾಸಕರಿರಲಿಲ್ಲವೇ? ಅವರು ನಿಮ್ಮಂತೆಯೇ ವರ್ತಿಸುತ್ತಿದ್ದರೇ ಎಂದು ಡಾಲು ರವಿ ಪ್ರಶ್ನಿಸಿದರು.

ಜೆಡಿಎಸ್ ತಾಲೂಕು ಅಧ್ಯಕ್ಷ ಮಲ್ಲೇನಹಳ್ಳಿ ಎಂ.ಮೋಹನ್, ರೈತ ಮೋರ್ಚಾ ಅಧ್ಯಕ್ಷ ಹೆಳವೇಗೌಡ, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಹಾಗೂ ಹಾಲಿ ನಿರ್ದೇಶಕ ಬಲದೇವ್, ಹಾಗೂ ಕಿಕ್ಕೇರಿ ಮಧು ನನ್ನನ್ನು ಭಾರೀ ಲಘುವಾಗಿ ಮಾತನಾಡಿದ್ದಾರೆ. ಇವರೆಲ್ಲರಿಗೂ ಅದೇ ದಾಟಿಯಲ್ಲಿ ಉತ್ತರ ನೀಡುತ್ತೇನೆ.

:ಜೆಡಿಎಸ್ ಬಿಡುವ ಪ್ರಶ್ನೆಯೇ ಇಲ್ಲ? ನಾನು ಜೆಡಿಎಸ್‌ನಲ್ಲಿದ್ದೇನೆ. ಯಾವುದೇ ಕಾರಣಕ್ಕೂ ಪಕ್ಷ ಬಿಡುವ ಪ್ರಶ್ನೆಯೇ ಇಲ್ಲ. ಈ ಬಗ್ಗೆ ಯಾರೂ ಕನಸು ಕಾಣಬೇಡಿ ಎಂದು ಡಾಲು ರವಿ ಸ್ಪಷ್ಟಪಡಿಸಿದ್ದಾರೆ.

ತಾಲ್ಲೂಕು ಯುವ ಜೆಡಿಎಸ್ ಅಧ್ಯಕ್ಷ ವಡ್ಡರಹಳ್ಳಿ ಮಹಾದೇವೇಗೌಡ ಅವರು ಸುಮಾರು 5ವರ್ಷಗಳ ಕಾಲ ಕೋರಮಂಡಲ್ ಸಕ್ಕರೆ ಕಾರ್ಖಾನೆಗೆ ವಡ್ಡರಹಳ್ಳಿ ಡೇರಿಯಿಂದ ಪೂರೈಕೆ ಮಾಡಿದ ಹಾಲಿನ ಹಣವನ್ನು



ಸುಮಾರು 20ಲಕ್ಷಕ್ಕೂ ಹೆಚ್ಚು ಹಣವನ್ನು ತಮ್ಮ ವಯಕ್ತಿಕ ಖಾತೆಗೆ ಜಮಾ ಮಾಡಿಸಿಕೊಂಡು ಅವ್ಯವಹಾರ ಮಾಡಿದ್ದಾರೆ. ಅದೇ ರೀತಿ ಐಕನಹಳ್ಳಿಕೊಪ್ಪಲು ಡೇರಿಯಲ್ಲೂ ಲಕ್ಷಾಂತರ ರೂ ಅವ್ಯವಹಾರ ನಡೆದಿದೆ. ಇಬ್ಬರೂ ಶಾಸಕರ ಕಟ್ಟಾ ಬೆಂಬಲಿಗರೇ ಆಗಿದ್ದಾರೆ. ಇದನ್ನು ಪ್ರಶ್ನೆ ಮಾಡಿದರೆ ನಾವು ಸರಿಯಿಲ್ಲ. ಅದು ರೈತರ ಬೆವರಿನ ಹಣ ಲೋಪವಾಗದಂತೆ ತಡೆಯಲು ನಮ್ಮನ್ನು ಹಾಲು ಉತ್ಪಾದಕರು ಆಯ್ಕೆ ಮಾಡಿದ್ದಾರೆ. ಅದನ್ನು ನಾನು ಮತ್ತು ಹರೀಶಣ್ಣ ಇಬ್ಬರೂ ಪ್ರಾಮಾಣಿಕವಾಗಿ ಮಾಡುತ್ತಿದ್ದೇವೆ. ಡೇರಿಗಳಲ್ಲಿ ಸೌಲಭ್ಯ ವಿತರಣೆಗೆ ನಮ್ಮ ಇಷ್ಟದಂತೆ ಎಲ್ಲಾ ಡೇರಿಗಳಿಗೂ ಆಧ್ಯತೆ ಮೇರೆಗೆ ನೀಡುತ್ತಿದ್ದೇವೆ. ಆದರೆ ಶಾಸಕರು ತಮ್ಮ ಅನುಧಾನವನ್ನು ಸರಿಯಾಗಿ ಹಾಕುತ್ತಿದ್ದಾರೆಯೇ? ಎಲ್ಲೆಲ್ಲಿ ಹಾಕುತ್ತಿದ್ದಾರೆ. ಯಾವ ಊರುಗಳಿಗೆ ತಾರತಮ್ಯ ಮಾಡುತ್ತಿದ್ದಾರೆ ಎಂಬುದು ಅಂಕಿ ಅಂಶಗಳ ಸಮೇತ ಮಾಹಿತಿ ಗೊತ್ತಿದೆ. ಆದರೆ ನಾವು ಶಾಸಕರ ಅನುಧಾನ ವಿತರಣೆಯಲ್ಲಿ ಹಸ್ತಕ್ಷೇಪ ಮಾಡಿರುವುದಿಲ್ಲ. ಆದರೆ ಶಾಸಕರು ಡೇರಿಗಳಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ. ತಮ್ಮ ಬೆಂಬಲಿತ ಡೇರಿಗಳ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಗಳಲ್ಲಿ ನಮ್ಮ ಹೆಸರನ್ನು ಹಾಕಿಸದೇ ಅವಮಾನ ಮಾಡಿದ್ದಾರೆ ಇದು ರಾಜಕೀಯ ಹಸ್ತಕ್ಷೇಪ ಅಲ್ಲವೇ ಎಂದು ಪ್ರಶ್ನಿಸಿದರು.

ಯಾವುದೇ ಡೇರಿಗೆ ಅನ್ಯಾಯವಾಗಿದ್ದರೆ ನಿರ್ದಿಷ್ಟವಾಗಿ ಆ ಸಂಘದ ಹೆಸರನ್ನು ಉಲ್ಲೇಖಿಸಿ, ಏನು ಅನ್ಯಾಯವಾಗಿದೆ ಎಂಬುದನ್ನು ಸಾಬೀತುಪಡಿಸಲಿ. ಆಧಾರ ರಹಿತ ಆರೋಪಗಳಿಂದ ಹಾಲು ಉತ್ಪಾದಕರಲ್ಲಿ ಗೊಂದಲ ಸೃಷ್ಟಿಸಬಾರದು ಎಂದು ಅವರು ಸವಾಲು ಹಾಕಿದರು.

**ಹಾಲಿನ ಪುಡಿ ಹಗರಣದಲ್ಲಿ ತಪ್ಪಿತಸ್ಥರಾದರೆ ರಾಜೀನಾಮೆ:**

ಹಾಲಿನ ಪುಡಿ ಹಗರಣದಲ್ಲಿ ನಾನು ತಪ್ಪಿತಸ್ಥ ಎಂಬುದನ್ನು ಸಾಬೀತುಪಡಿಸಿದರೆ ಒಂದು ಕ್ಷಣವೂ ಅಧಿಕಾರದಲ್ಲಿ ಮುಂದುವರಿಯುವುದಿಲ್ಲ. ರಾಜೀನಾಮೆ ನೀಡಿ ಹೊರಬರುತ್ತೇನೆ ಎಂದು ಘೋಷಿಸಿದ್ದಾರೆ.

ರಾಜೀನಾಮೆ ನೀಡಿ ಚುನಾವಣೆಗೆ ಬನ್ನಿ: ನಿಮ್ಮ ರಾಜಕೀಯ ಬೆದರಿಕೆಗಳಿಗೆ, ವಯಕ್ತಿಕ ಟೀಕೆಗಳಿಗೆ, ಹೆದರುವುದಿಲ್ಲ. ನಿಮ್ಮ ಬೆಂಬಲಿಗರನ್ನು ಹತೋಟಿಯಲ್ಲಿಟ್ಟುಕೊಳ್ಳಿ. ಇಲ್ಲವೇ ಇನ್ನೂ ಒಂದೂವರೆ ವರ್ಷವಿದೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಚುನಾವಣೆಗೆ ಬನ್ನಿ, ನಿಮ್ಮ ಎದುರು ನಾನೇ ನಿಲ್ಲುತ್ತೇನೆ. ಗೆದ್ದು ನನ್ನ ಶಕ್ತಿ ಏನೆಂದು ತೋರಿಸುತ್ತೇನೆ ಎಂದು ಶಾಸಕ ಎಚ್.ಟಿ.ಮಂಜು ಅವರಿಗೆ ಡಾಲು ರವಿ ನೇರ ಸವಾಲು ಹಾಕಿದರು. ಮನ್ಮುಲ್ ನಿರ್ದೇಶಕ ಎಂ.ಬಿ.ಹರೀಶ್ ಮಾತನಾಡಿ, ಹಾಲು ಉತ್ಪಾದಕರಿಗೆ ಅನ್ಯಾಯವಾಗಿದೆ ಎಂದು ಪ್ರತಿಭಟನೆ ನಡೆಸಿದ ಜೆಡಿಎಸ್ ಮುಖಂಡರು, ಉತ್ಪಾದಕರ ಸಮಸ್ಯೆ ಬಗೆಹರಿಸುವುದನ್ನು ಬಿಟ್ಟು ಡಾಲು ರವಿ ಅವರನ್ನು ಟೀಕಿಸುವುದರಲ್ಲೇ ನಿರತರಾಗಿದ್ದೇಕೆ? ಡಾಲು ರವಿ ಅವರನ್ನು ಟೀಕಿಸುವುದೇ ನಿಮ್ಮ ಉದ್ದೇಶವಾಗಿದ್ದರೆ ಖಾಸಗಿ ವೇದಿಕೆಯಲ್ಲಿ ಟೀಕಿಸಬಹುದಿತ್ತಲ್ಲವೇ? ಅದಕ್ಕೆ ಮನ್ಮುಲ್ ಶಿಥಲೀಕರಣ ಕೇಂದ್ರವನ್ನೇ ಏಕೆ ಆಯ್ಕೆ ಮಾಡಿಕೊಂಡಿದ್ದೀರಿ ಎಂದು ಶಾಸಕ ಎಚ್.ಟಿ.ಮಂಜು ಹಾಗೂ ಜೆಡಿಎಸ್ ಮುಖಂಡರನ್ನು ಪ್ರಶ್ನಿಸಿದರು.

ಹಾಲಿನ ಪುಡಿ ಕಲಬೆರಕೆಯಲ್ಲಿ ನಮ್ಮ ಪಾತ್ರವಿಲ್ಲ: ಹಾಲಿನ ಪುಡಿ ಕಲಬೆರಕೆ ಪ್ರಕರಣದಲ್ಲಿ ನನ್ನ ಹಾಗೂ ಡಾಲು ರವಿ ಅವರ ಪಾತ್ರವಿದೆ ಎಂದು ಆರೋಪಿಸುವವರಿಗೆ ಸವಾಲು ಹಾಕುತ್ತೇನೆ. ನನ್ನ ಮಕ್ಕಳಾಣೆಗೂ ಈ ಪ್ರಕರಣದಲ್ಲಿ ನಮ್ಮ ಪಾತ್ರವಿಲ್ಲ ಎಂದು ಹರೀಶ್ ಖಾರವಾಗಿ ಸ್ಪಷ್ಟಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಟಿಎಪಿಸಿಎಂಎಸ್ ನಿರ್ದೇಶಕ ಎಂ.ಪಿ.ಲೋಕೇಶ್, ಬ್ಯಾಂಕ್ ನಿರ್ದೇಶಕರಾದ ಕಬ್ಬಲಗೆರೆಪುರ ಪುಟ್ಟಸ್ವಾಮಿಗೌಡ, ಶೀಳನೆರೆ ರಾಮೇಗೌಡ, ಸಾರಂಗಿ ವಿಶ್ವನಾಥ್, ನಾಗೇಶ್, ಪರಮೇಶ್, ಸಾಧುಗೋನಹಳ್ಳಿ ಲೋಕೇಶ್ ಸೇರಿದಂತೆ ಸಾವಿರಾರು ಬೆಂಬಲಿಗರು ಭಾಗವಹಿಸಿದ್ದರು.

# ಭೂಮಿಯೇ ಬಡವರ ಬದುಕಿನ ಆಧಾರ, ಸಾಗುವಳಿ ಚೀಟಿಗಾಗಿ ಧರಣಿ (29,519 ಬಗರ್‌ಹುಕುಂ ಅರ್ಜಿ ವಜಾಕ್ಕೆ ರೈತರ ಆಕ್ರೋಶ)



ದೇವನಹಳ್ಳಿ: ಭೂಮಿಯೇ ಬಡವರ ಬದುಕಿನ ಆಧಾರವಾಗಿದೆ. ಸಾಗುವಳಿ ಚೀಟಿ ನೀಡದ ರೈತ ವಿರೋಧಿ ಸರಕಾರ ಮತ್ತು ಅಧಿಕಾರಿಗಳಿಗೆ ರೈತರ ಶಾಪ ತಟ್ಟದೆ ಬಿಡುವುದಿಲ್ಲ ಎಂದು ಬಗರ್ ಹುಕ್ಕುಂ ಸಾಗುವಳಿದಾರರ ಹೋರಾಟ ಸಮಿತಿಯ ಸದಸ್ಯ ಕಾರಹಳ್ಳಿ ಶ್ರೀನಿವಾಸ್ ತಿಳಿಸಿದರು.

ದೇವನಹಳ್ಳಿ ತಾಲೂಕಿನ ಜಿಲ್ಲಾಡಳಿತ ಭವನದ ಎದುರು ಕೊಯಿರ ಭೂಸ್ವಾಧೀನ ವಿರೋಧಿ ಹೋರಾಟಗಾರರು ಹಾಗೂ ಬಗುರ್ ಹುಕ್ಕುಂ ಸಾಗುವಳಿ ಚೀಟಿದಾರರ ಹೋರಾಟ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು. ಜಿಲ್ಲೆಯಲ್ಲಿ ಬಗರ್‌ಹುಕುಂ ಸಾಗುವಳಿದಾರರು ನಮೂನೆ 57ರಲ್ಲಿ ಸಲ್ಲಿಸಿರುವ 29,519 ಅರ್ಜಿಗಳನ್ನು ವಜಾಗೊಳಿಸುತ್ತಿರುವ ಕ್ರಮವನ್ನು ವಿರೋಧಿಸುತ್ತೇವೆ. ಅರ್ಜಿಗಳ ಮರುಪರಿಶೀಲನೆ ಹಾಗೂ ಅರ್ಹ ರೈತರಿಗೆ ಸಾಗುವಳಿ ಚೀಟಿ ನೀಡುವಂತೆ ಆಗ್ರಹಿಸಿ ಅ.16ರಂದು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನಾ ಧರಣಿ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಜಿಲ್ಲೆಯ ಸರ್ಕಾರಿ ಬರಡು ಭೂಮಿಯನ್ನು ಕೃಷಿಯೋಗ್ಯ ಭೂಮಿಯನ್ನಾಗಿ ಪರಿವರ್ತಿಸಿ, ತಲೆಮಾರುಗಳಿಂದ ಕೃಷಿ ಮಾಡುತ್ತಾ ಜೀವನ ಸಾಗಿಸುತ್ತಿರುವ ರೈತರು ನಮೂನೆ 50, 53 ಮತ್ತು 57ರ ಅಡಿಯಲ್ಲಿ ಸಾಗುವಳಿ ಸಕ್ರಮಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ. ಜಿಲ್ಲೆಯ ದೇವನಹಳ್ಳಿ ತಾಲೂಕಿನ3,756, ಹೊಸಕೋಟೆಯಲ್ಲಿ 5,340, ನೆಲಮಂಗಲದಲ್ಲಿ 6,645 ಹಾಗೂ ದೊಡ್ಡಬಳ್ಳಾಪುರದಲ್ಲಿ 13,781 ಅರ್ಜಿಗಳು ಸೇರಿದಂತೆ ಒಟ್ಟು 29,519 ಅರ್ಜಿಗಳನ್ನು ವಜಾಗೊಳಿಸಲಾಗುತ್ತಿದೆ. ಆದರೆ, ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಅರ್ಜಿಗಳನ್ನು ಸೂಕ್ತ ಪರಿಶೀಲನೆ ನಡೆಸದೆ ವಜಾಗೊಳಿಸಲಾಗುತ್ತಿರುವುದನ್ನು ಬಿಡಬೇಕು ಎಂದು ಆಗ್ರಹಿಸಿದರು.

ರೈತ ಮುಖಂಡ ಮೂಡಿಗಾನಹಳ್ಳಿ ರಮೇಶ್. ಎನ್ ಮಾತನಾಡಿ, ಸರಕಾರ ಅಧಿಕಾರಕ್ಕೆ ಬಂದು 3 ವರ್ಷ ಕಳೆದಿದ್ದರೂ ಬಗರ್‌ಹುಕುಂ ಸಕ್ರಮೀಕರಣ ಸಮಿತಿಯ ಸಭೆ ನಡೆದಿಲ್ಲ. ಅರ್ಹ ರೈತರಿಗೆ ಸಾಗುವಳಿ ಚೀಟಿ ನೀಡುವ ಪ್ರಕ್ರಿಯೆಯೂ ಸಮರ್ಪಕವಾಗಿ ನಡೆಯುತ್ತಿಲ್ಲ. ಮತ್ತೊಂದೆಡೆ ಕೈಗಾರಿಕೆ ಹಾಗೂ ರಿಯಲ್ ಎಸ್ಟೇಟ್ ಚಟುವಟಿಕೆಗಳಿಂದ ಕೃಷಿಭೂಮಿಗೆ ಒತ್ತಡ ಹೆಚ್ಚುತ್ತಿದೆ. ಇಂತಹ ಸಂದರ್ಭದಲ್ಲಿ ಭೂಮಿಯನ್ನೇ ಜೀವನಾಧಾರವಾಗಿಸಿಕೊಂಡಿರುವ ಬಡ ರೈತರ ಹಕ್ಕುಗಳನ್ನು ರಕ್ಷಿಸಬೇಕಿದೆ ಎಂದು ಒತ್ತಾಯಿಸಿದರು.

ಹಕ್ಕೊತ್ತಾಯಗಳೇನು?:

ನಮೂನೆ 53 ಮತ್ತು 57ರಲ್ಲಿ ಸಲ್ಲಿಸಿ ವಜಾಗೊಂಡಿರುವ ಅರ್ಜಿಗಳನ್ನು ಮರುಪರಿಶೀಲಿಸಿ, ಅರ್ಹ ಸಾಗುವಳಿದಾರರಿಗೆ ಸಾಗುವಳಿ ಚೀಟಿ ನೀಡಬೇಕು. ಈ ಹಿಂದೆ ಬಗರ್‌ಹುಕುಂ ಸಕ್ರಮೀಕರಣ ಸಮಿತಿಯಲ್ಲಿ ಮಂಜೂರಾಗಿರುವ ರೈತರಿಗೆ ಕೂಡಲೇ ಸಾಗುವಳಿ ಚೀಟಿ ವಿತರಿಸಬೇಕು. ಸಾಗುವಳಿ ಚೀಟಿ ಪಡೆದ ರೈತರಿಗೆ ಖಾತೆ ಹಾಗೂ ಪಹಣಿ ಮಾಡಿಕೊಡಬೇಕು. ಭೂಮಿಯ ಹಕ್ಕು ಬಡಜನರ ಬದುಕಿನ ಆಧಾರವಾಗಿದ್ದು, ಧರಣಿಯಲ್ಲಿ ನಾಗರಿಕರು ಹಾಗೂ ಪ್ರಗತಿಪರ ಸಂಘಟನೆಗಳ ಹೋರಾಟಗಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಸಂಘಟಕರು ಮನವಿ ಮಾಡಿದರು.

ಪ್ರಾಂತ ರೈತ ಸಂಘದ ಚಂದ್ರತೇಜಸ್ವಿ, ಮಾರೇಗೌಡ, ಕೊಯಿರ ಚಿಕ್ಕೇಗೌಡ, ರವಿಕುಮ್, ಸುಬ್ರಮಣಿ, ನಾಗೇಶ್, ಡಿಎಸ್‌ಎಸ್ ಚಿನ್ನಸವಾಮಿ, ನಾಗರಾಜು. ಎಂ, ಅಶ್ವತ್ಥ್.ಎಂ(ಜಿಎಸ್‌ಟಿ), ನಾರಾಯಣಸ್ವಾಮಿ, ಕೊಯಿರ ಭೂಸ್ವಾಧೀನ ವಿರೋಧಿ ಹೋರಾಟಗಾರರು ಹಾಗೂ ಬಗುರ್ ಹುಕ್ಕುಂ ಸಾಗುವಳಿ ಚೀಟಿದಾರರ ಹೋರಾಟ ಸಮಿತಿಯ ಸದಸ್ಯರು, ರೈತರು ಮತ್ತು ಮಹಿಳೆಯರು ಭಾಗವಹಿಸಿದ್ದರು.

# ಹೆಬ್ಬಣಿ ಗ್ರಾಮ ಪಂಚಾಯಿತಿಗೆ ಕೋಲಾರ ಜಿ.ಪಂ ಸಿಇಒ ಡಾ. ಪ್ರವೀಣ್ ಪಿ. ಬಾಗೇವಾಡಿ ಭೇಟಿ: ವಿವಿಧ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ



ಮುಳಬಾಗಿಲು: ಹೆಬ್ಬಣಿ ಗ್ರಾಮ ಪಂಚಾಯಿತಿಗೆ ಕೋಲಾರ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾಂರ್ಯನಿರ್ವಾಹಕ ಅಧಿಕಾರಿ (ಸಿಇಒ) ಡಾ. ಪ್ರವೀಣ್ ಪಿ. ಬಾಗೇವಾಡಿ (ಐಎಎಸ್) ಅವರು ಭೇಟಿ ನೀಡಿ, ಗ್ರಾಮದಲ್ಲಿ ನಡೆಯುತ್ತಿರುವ ವಿವಿಧ ಅಭಿವೃದ್ಧಿ ಕಾಮಗಾ–ರಿಗಳ ಪ್ರಗತಿಯನ್ನು ಖುದ್ದು ಪರಿಶೀಲಿಸಿದರು.

ಗ್ರಾಮದಲ್ಲಿನ ಮೂಲಸೌಕರ್ಯ ಹಾಗೂ ಆಡಳಿತಾತ್ಮಕ ಕಾರ್ಯಗಳತ್ತ ಗಮನಹ–ರಿಸಿದ ಅವರು, ಪ್ರಮುಖವಾಗಿ ಪಂಚಾಯಿತಿ ವ್ಯಾಪ್ತಿಯಲ್ಲಿನ ತ್ಯಾಜ್ಯ ಸಂಗ್ರಹಣೆ ಹಾಗೂ ವಿಲೇವಾರಿ ಪ್ರಕ್ರಿಯೆಯನ್ನು ವೀಕ್ಷಿಸಿದರು. ಜೊತೆಗೆ ಪಂಚಾಯಿತಿಯ ತೆರಿಗೆ ವಸೂಲಾತಿ ಪ್ರಗತಿ ಹಾಗೂ

ಸರ್ಕಾರದ ಮಹತ್ವಾಕಾಂಕ್ಷಿ ವಸತಿ ಯೋಜನೆಗಳ ಅನುಷ್ಠಾನ ಎಷ್ಟರಮಟ್ಟಿಗೆ ಆಗಿದೆ ಎಂಬುದರ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಇದಾದ ಬಳಿಕ, ವಿ.ಬಿ.ಜಿ ರಾಮ್ ಜಿ ಯೋಜನೆಯಡಿ ಗ್ರಾಮದಲ್ಲಿ ಪ್ರಗತಿಯಲ್ಲಿರುವ ಚರಂಡಿ ನಿರ್ಮಾಣ ಕಾಮಗಾರಿಗಳು ಹಾಗೂ ಮನೆಮನೆಗೆ ಕುಡಿಯುವ ನೀರು ಒದಗಿಸುವ 'ಜಲಜೀವನ್ ಮಿಷನ್'

(ಎಎಒ) ಕಾಮಗಾರಿಗಳ ಗುಣಮಟ್ಟವನ್ನು ಪರಿಶೀಲಿಸಿದರು. ಇದೇ ವೇಳೆ ಗ್ರಾಮಸ್ಥರೊಂದಿಗೆ ಮುಕ್ತವಾಗಿ ಸಂವಹನ ನಡೆಸಿದ ಸಿಇಒ ಅವರು, ಸೌಲಭ್ಯಗಳ ಬಗ್ಗೆ ಸಾರ್ವಜನಿಕರ ಅಹವಾಲುಗಳನ್ನು ಹಾಗೂ ಅನಿಸಿಕೆಗಳನ್ನು ಆಲಿಸಿದರು.

ಈ ಪರಿಶೀಲನಾ ಭೇಟಿಯ ಸಂದರ್ಭದಲ್ಲಿ ಮುಳಬಾಗಿಲು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ (ಇಒ), ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ (ಖಘಖ) ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಗ್ರಾಮ ಪಂಚಾಯಿತಿ ಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

# ವಾಲ್ಮೀಕಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಿ: ವೆಂಕಟೇಶ್ ಮುಳಬಾಗಿಲಿನಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಒತ್ತಾಯ



ಮುಳಬಾಗಿಲು: ಪ್ರತಿ ವರ್ಷದಂತೆ ಅ.26ರಂದು ವಾಲ್ಮೀಕಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಬೇಕು. ಜಯಂತಿ ಕೇವಲ ಕಾರ್ಯಕ್ರಮಕ್ಕೆ ಸೀಮಿತವಾಗದೆ ವಾಲ್ಮೀಕಿ ಮಹರ್ಷಿಗಳ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ವಾಲ್ಮೀಕಿ ಸಮುದಾಯದ ಪ್ರಧಾನ ಕಾರ್ಯದರ್ಶಿ ಹಾಗೂ ವಕೀಲ ವೆಂಕಟೇಶ್ ಹೇಳಿದರು.

ನಗರದ ತಾಲೂಕು ಕಚೇರಿಯಲ್ಲಿ ತಹಶೀಲ್ದಾರ್ ಗೀತಾ ಅಧ್ಯಕ್ಷತೆಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಪೂರ್ವಭಾವಿ ಸಭೆ ನಡೆಯಿತು. ತಾಲೂಕಿನಲ್ಲಿ ವಾಲ್ಮೀಕಿ ಸಮುದಾಯವು ಗಣನೀಯ ಸಂಖ್ಯೆಯಲ್ಲಿದ್ದರೂ ಇದುವರೆಗೆ ಸ್ವಂತ ಸಮುದಾಯ ಭವನ ಇಲ್ಲದಿರುವುದು ವಿಷಾದಕರ, ಸೀಗೆನಹಳ್ಳಿ ಗ್ರಾಮದ ಸರ್ವೆ ನಂಬರ್ 65 ರಲ್ಲಿ 1 ಎಕರೆ ಜಮೀನನ್ನು ಮಾಜಿ ಶಾಸಕ ಕೊತ್ತೂರು ಮಂಜುನಾಥ್ ಅವರ ಅವಧಿಯಲ್ಲಿ ಮಂಜೂರು ಮಾಡಿ 2016ರ ಮಾ.09 ರಂದು ಸಮಾಜ ಕಲ್ಯಾಣ ಇಲಾಖೆಗೆ ಹಸ್ತಾಂತರಿಸಲಾಗಿದೆ.

ಈ ಭವನ ನಿರ್ಮಾಣಕ್ಕೆ ಸರ್ಕಾರದಿಂದ 1ಕೋಟಿ ರೂಪಾಯಿ ಅನುದಾನ ಮಂಜೂರಾಗಿ, ಮೊದಲ ಹಂತದಲ್ಲಿ 25ಲಕ್ಷ ರೂಪಾಯಿ ಬಿಡುಗಡೆಯಾಗಿ ಶ್ರೀಪ್ರಸನ್ನಾನಂದಪುರಿ ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಗುದ್ದಲಿ ಪೂಜೆ ನೆರವೇರಿಸಿ ಕಾಮಗಾರಿ ಆರಂಭವಾಗಿತ್ತು ಎಂದರು.

ಕಾನೂನು ತೊಡಕು ನಿವಾರಣೆ: ಬುಸಾಲುಕುಂಟೆ ವಾಸಿಗಳು ಸಲ್ಲಿಸಿದ್ದ ರಿಟ್ ಅರ್ಜಿ ಕಾರಣದಿಂದ ಕಾಮಗಾರಿ ಸ್ಥಗಿತಗೊಂಡಿತ್ತು. ಇದೀಗ ಆ ಪ್ರಕರಣವು ಹೈಕೋರ್ಟ್‌ನಲ್ಲಿ ವಜಾಗೊಂಡಿದ್ದು,

ಅಧಿಕಾರಿಗಳು ಕೋರ್ಟ್ ಆದೇಶದ ಪ್ರತಿ ಪಡೆದು ಉಳಿದ 75 ಲಕ್ಷ ರೂಪಾಯಿ ಅನುದಾನ ಬಳಸಿಕೊಂಡು ಶೀಘ್ರದಲ್ಲೇ ಕಾಮಗಾರಿ ಪುನರಾರಂಭಿಸಬೇಕೆಂದು ಒತ್ತಾಯಿಸಿದರು.

ಒಂದು ವೇಳೆ ವಿಳಂಬವಾದಲ್ಲಿ ತಹಶೀಲ್ದಾರ್ ಕಚೇರಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾಧಿಕಾರಿ ಕಚೇರಿ ಮುಂದೆ ಧರಣಿ ನಡೆಸಲಾಗುವುದು ಎಂದು ಎಚ್ಚರಿಸಿದರು.

ಪಲ್ಲಕ್ಕಿ ಉತ್ಸವಕ್ಕೆ ಕರೆ:

ಕಳೆದ ವರ್ಷ ಕೆಲವು ಗ್ರಾಮ ಪಂಚಾಯತಿಗಳಿಂದ ಪಲ್ಲಕ್ಕಿಗಳು ಬಂದಿರಲಿಲ್ಲ. ಈ ಬಾರಿ ತಾಲೂಕು ಮಟ್ಟದ ಜಯಂತಿಗೆ ಪ್ರತಿ ಗ್ರಾಮ ಪಂಚಾಯತಿಯಿಂದ ಕಡ್ಡಾಯವಾಗಿ ಪಲ್ಲಕ್ಕಿ ಹಾಗೂ ಪ್ರತಿನಿಧಿಗಳು ಆಗಮಿಸುವಂತೆ ತಾಲೂಕು ಪಂಚಾಯತ್ ಇಓ ಮೂಲಕ ಸೂಚನೆ ನೀಡಬೇಕು ಎಂದು ಮನವಿ ಮಾಡಿದರು.

ಮಹರ್ಷಿ ವಾಲ್ಮೀಕಿ ಅವರು ಒಂದು ಸಮುದಾಯಕ್ಕೆ ಸೀಮಿತರಲ್ಲ, ರಾಮಾಯಣ ಮಹಾಕಾವ್ಯ ರಚಿಸಿದ ಆದಿಕವಿ. ಅವರ ಜಯಂತಿಯನ್ನು ಎಲ್ಲ ಸಮುದಾಯ ದವರು ಸೇರಿ ಯಶಸ್ವಿಗೊಳಿಸಬೇಕು ಎಂದು ಕರೆ ನೀಡಿದರು.ಪ್ರಸ್ತುತ ವಿಧಾನ ಪರಿಷತ್ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿ ಇರುವುದರಿಂದ 26 ರಂದು ಸರಳವಾಗಿ ಜಯಂತಿ ಆಚರಿಸಿ, ನಂತರ ಶಾಸಕ ಸಮೃದ್ಧಿ ಮಂಜುನಾಥ್ ಅವರೊಂದಿಗೆ ಚರ್ಚಿಸಿ ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಚರಿಸಲಾಗುವುದೆಂದರು.

ಸಭೆಯಲ್ಲಿ ಸಮಾಜ ಕಲ್ಯಾಣ ಅಧಿಕಾರಿ ಹರೀಶ್, ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಸಮುದಾಯದ ಅಧ್ಯಕ್ಷ ಆವಣಿ ಸುಬ್ಬಣ್ಣ, ಉಪಾಧ್ಯಕ್ಷ ಗೌರಪ್ಪ ಸ್ವಾಮಿ, ಖಜಾಂಚಿ ಬ್ಯಾಂಕ್ ಆನಂದ್, ನಿರ್ದೇಶಕರಾದ ಕೊತ್ತಮಂಗಳ ರಾಮಚಂದ್ರಪ್ಪ ಕೋಗಿಲೇರು ಬಾಬು, ಸುಬ್ರಮಣಿ, ದೊಡ್ಡಗುಟ್ಟಹಳ್ಳಿ ಬಾಲು, ಬೇಕರಿ ರವಿ, ಮುನಿಸ್ವಾಮಿ, ಗಂಗರಾಜು, ಚಂದ್ರ, ಬಿಕ್ಕನಹಳ್ಳಿ ರಾಜು, ಸುಬ್ರಮಣಿ, ಚನ್ನರಾಯಪ್ಪ, ರಾಮಚಂದ್ರಪ್ಪ ಬಲಪಲ್ಲಿ, ರಮೇಶ್, ಸದಾಶಿವ, ವಕೀಲ ಮುನಿರತ್ನಂ, ಸಂಜೀವಪ್ಪ ಸೇರಿದಂತೆ ಸಭೆಯಲ್ಲಿ ಹಲವರಿದ್ದರು.

# ಮೈಸೂರು ದಸರಾ ಸಾಂಸ್ಕೃತಿಕ ವೇದಿಕೆಯಲ್ಲಿ ನಾದಸ್ವರದ ನಿನಾದ

## ವಿದ್ವಾನ್ ಎಸ್. ಶ್ರೀನಿವಾಸಲು ತಂಡದಿಂದ ಮನಮೋಹಕ ನಾದಸ್ವರ ಕಚೇರಿ



ಕೋಲಾರ, ಅ.16: ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಮೈಸೂರಿನ ಜಗನ್ಮೋಹನ ಅರಮನೆಯ ಸಾಂಸ್ಕೃತಿಕ ವೇದಿಕೆಯಲ್ಲಿ ನಾದಸ್ವರ ಕಚೇರಿ ಅದ್ದೂರಿಯಾಗಿ ನಡೆಯಿತು. ಪಿಟೀಲು ಚೌಡಯ್ಯ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ನಾದಸ್ವರ ವಿದ್ವಾನ್ ಆರ್. ಶ್ರೀರಾಮುಲು ಅವರ ಸುಪುತ್ರ ಹಾಗೂ ಕೋಲಾರ ಜಿಲ್ಲಾ ಸವಿತಾ ಸಮಾಜದ ಗೌರವಾಧ್ಯಕ್ಷರಾದ ಎಸ್. ಮಂಜುನಾಥ್ ಅವರ ಉಪಸ್ಥಿತಿಯಲ್ಲಿ ಕಾರ್ಯಕ್ರಮ ಗಮನ ಸೆಳೆಯಿತು.

ನಾದಸ್ವರ ವಿದ್ವಾನ್ ಎಸ್. ಶ್ರೀನಿವಾಸಲು ಅವರ ನೇತೃತ್ವದಲ್ಲಿ ಎಸ್. ನಾರಾಯಣಸ್ವಾಮಿ, ಎಸ್. ಕೆಂಪರಾಜು, ಆನೇಕಲ್‌ನ ಡೋಲು ವಿದ್ವಾನ್ ಎಸ್. ಮಂಜುನಾಥ್, ದೊಡ್ಡಬಳ್ಳಾಪುರದ ಡೋಲು ವಿದ್ವಾನ್ ಆರ್. ವೆಂಕಟರಾಜು, ಡೋಲು ವಿದ್ವಾನ್ ವಿ. ಪ್ರವೀಣ್, ತಾಳದಲ್ಲಿ ಆರ್. ಕೃಷ್ಣ ಹಾಗೂ ಶ್ರುತಿಯಲ್ಲಿ ಗಣೇಶ್ ಅವರನ್ನೊಳಗೊಂಡ ತಂಡ ಸುಮಾರು ಒಂದು ಗಂಟೆಗಳ ಕಾಲ ಮನಮೋಹಕ ನಾದಸ್ವರ ಕಚೇರಿ ನಡೆಸಿಕೊಟ್ಟಿತು. ನಾದಸ್ವರದಲ್ಲಿ ಶ್ರೀರಾಗ, ಆನಂದ ಭೈರವಿ ಹಾಗೂ ಗೌರಿಮನೋಹರಿ ಸೇರಿದಂತೆ ವಿವಿಧ ರಾಗಗಳನ್ನು ಆಧರಿಸಿದ ಕೀರ್ತನೆಗಳನ್ನು ಪ್ರಸ್ತುತಪಡಿಸುವ ಮೂಲಕ ಕಲಾವಿದರು ನೆರೆದಿದ್ದ ಪ್ರೇಕ್ಷಕರನ್ನು ಸಂಗೀತದ ಲೋಕದಲ್ಲಿ ತೇಲುವಂತೆ ಮಾಡಿದರು. ಅವರ ಸುಮಧುರ ಸಂಗೀತಕ್ಕೆ ಪ್ರೇಕ್ಷಕರು ಮೆಚ್ಚುಗೆ ವ್ಯಕ್ತಪಡಿಸಿದರು.ಕಾರ್ಯಕ್ರಮದ ಅಂಗವಾಗಿ ಸರ್ಕಾರದ ವತಿಯಿಂದ ಕಲಾವಿದರಿಗೆ ಪ್ರಶಸ್ತಿ ಪತ್ರ ನೀಡಿ ಆತ್ಮೀಯವಾಗಿ ಗೌರವಿಸಲಾಯಿತು. ಮೈಸೂರು ದಸರಾ ಸಾಂಸ್ಕೃತಿಕ ವೇದಿಕೆಯಲ್ಲಿ ನಾದಸ್ವರದ ಮೂಲಕ ಕನ್ನಡ ನಾಡಿನ ಶಾಸ್ತ್ರೀಯ ಸಂಗೀತ ಪರಂಪರೆಯನ್ನು ಪರಿಚಯಿಸಿದ ಈ ಕಾರ್ಯಕ್ರಮ ವಿಶೇಷ ಮೆಚ್ಚುಗೆಗೆ ಪಾತ್ರವಾಯಿತು.

## ಅಮೆರಿಕಾದ ವಾಕ್ಸೋನಿಕ್ಸ್ - ವಾಕ್ಸೋಜೇನ್ ಕಂಪನಿಗಳ ಜೊತೆ ಒಪ್ಪಂದ ಡಿಎನ್ಎ ಆಧಾರಿತ ಚಿಕಿತ್ಸಾ ತಂತ್ರಜ್ಞಾನಕ್ಕೆ ಶ್ರೀದೇವಿ ಸಂಸ್ಥೆ ದಾಪುಗಾಲು

ತುಮಕೂರು: ಡಿಎನ್ಎ ಆಧಾರಿತ ಚಿಕಿತ್ಸೆ ಮತ್ತು ಸಂಶೋಧನೆಗೆ ಹೆಚ್ಚು ಉತ್ತೇಜನ ನೀಡಲು ಶ್ರೀದೇವಿ ಸಂಸ್ಥೆ ಮತ್ತು ಅಮೆರಿಕಾದ ವಾಕ್ಸೋಜೇನ್ ಕಂಪನಿಗಳ ಜೊತೆ ಮಹತ್ವದ ಒಪ್ಪಂದಕ್ಕೆ ಶುಕ್ರವಾರ ಸಹಿ ಹಾಕಲಾಯಿತು.ಅಮೆರಿಕಾ ಕಂಪನಿಯ ಮುಖ್ಯಸ್ಥ ಕೆಂಪಯ್ಯರಾಯವಾರ ಹಾಗೂ ಕಂಪನಿಯ ಸಿಇಒ ಶಿವಕುಮಾರ್ ಶ್ರೀದೇವಿ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಡಾ.ಎಂ.ಆರ್.ಹುಲಿನಾಯ್ಕರ್ ಒಪ್ಪಂದವನ್ನು ಪರಸ್ಪರ ವಿನಿಮಯ ಮಾಡಿಕೊಂಡರು. ಬಳಿಕ ವಾಕ್ಸೋಜೇನ್ ಕಂಪನಿ ಮುಖ್ಯಸ್ಥ ಕೆಂಪಯ್ಯರಾಯವಾರ ಮಾತನಾಡಿ, ದೀರ್ಘಕಾಲದ, ವಾಸಿಯಾಗದ ಮತ್ತು ಕ್ಯಾನ್ಸರ್ ಕಾಯಿಲೆಗಳಿಗೆ ಕೈಗೆಟುಕುವ ದರದಲ್ಲಿ ಚಿಕಿತ್ಸೆ ಲಭ್ಯವಾಗಬೇಕು, ಸಮಾಜಕ್ಕೆ ಇದರ ಪ್ರಯೋಜನ ಸಿಗಬೇಕು ಎಂಬ ಉದ್ದೇಶದಿಂದ ಒಪ್ಪಂದ ಮಾಡಿಕೊಳ್ಳಲಾಗಿದೆ. ಇದರ ಮೂಲಕ ಆನುವಂಶಿಕ ಕಾಯಿಲೆಗಳನ್ನು ಗುರುತಿಸುವುದು, ಅವುಗಳಿಗೆ ಸೂಕ್ತ ಚಿಕಿತ್ಸೆ ಅಭಿವೃದ್ಧಿಪಡಿಸುವುದು ಹಾಗೂ ಪ್ರತಿಯೊಬ್ಬ ವ್ಯಕ್ತಿಯ ಆರೋಗ್ಯ ಸ್ಥಿತಿಗೆ ಅನುಗುಣವಾಗಿ ವೈಯಕ್ತಿಕ ಚಿಕಿತ್ಸಾ ವಿಧಾನ ಹಾಗೂ ಔಷಧಿಗಳನ್ನು ಕಂಡು ಹಿಡಿಯುವುದು ಇದರ ಉದ್ದೇಶವಾಗಿದೆ ಎಂದರು.

ವೈಯಕ್ತಿಕ ಚಿಕಿತ್ಸೆಗೆ ಆದ್ಯತೆ: ಮಾನವ ಅಂಗಾಂಶಗಳ ಮಾದರಿಗಳನ್ನು (ಹ್ಯೂಮನ್ ಆರ್ಗನಾಯ್ಡ್) ಅಭಿವೃದ್ಧಿಪಡಿಸಿ, ಅವುಗಳ ನೆರವಿನಿಂದ ವಿವಿಧ ಕಾಯಿಲೆಗಳಿಗೆ ಔಷಧಗಳನ್ನು ಮತ್ತು ಚಿಕಿತ್ಸಾ ವಿಧಾನಗಳನ್ನು ರೂಪಿಸುವುದು. ವಿಶೇಷವಾಗಿ ಡಿಎನ್ಎಯಲ್ಲಿನ ಬದಲಾವಣೆಗಳು ಹಾಗೂ ಆನುವಂಶಿಕ ವ್ಯತ್ಯಾಸಗಳಿಂದ ಉಂಟಾಗುವ ಕಾಯಿಲೆಗಳನ್ನು ಗುರುತಿಸಿ, ಅವುಗಳಿಗೆ ಸೂಕ್ತ ಚಿಕಿತ್ಸೆ ನೀಡಲು ಈ ಒಪ್ಪಂದ ಸಹಕಾರಿಯಾಗಲಿದೆ ಎಂದು ಅಭಿಪ್ರಾಯಪಟ್ಟರು. ಶ್ರೀದೇವಿ ಸಂಸ್ಥೆಯಲ್ಲಿ ಉತ್ತಮ ಮೂಲಸೌಕರ್ಯ, ಸಂಶೋಧನಾ ಮೂಲ ಸೌಲಭ್ಯ ನುರಿತ ಪ್ರಾಧ್ಯಾಪಕರು, ವೈದ್ಯರು, ಸಂಶೋಧಕರು ತಂಡವಿದೆ. ಈ ಸೌಲಭ್ಯ ಬಳಸಿಕೊಂಡು ವಾಕ್ಸೋಜೇನ್ ಸಂಸ್ಥೆಯೊಂದಿಗೆ ಸಂಶೋಧನೆ ಕೈಗೊಳ್ಳಲು ಇದು ಪ್ರಯೋಜನವಾಗಲಿದೆ ಎಂದರು. ಕಂಪನಿಯ ಸಿಇಒ ಶಿವಕುಮಾರ್ ಮಾತನಾಡಿ, ಅನುವಂಶಿಕ ಕಾಯಿಲೆಗಳನ್ನು

ಆರಂಭಿಕ ಹಂತದಲ್ಲಿಯೇ ಪತ್ತೆಹಚ್ಚಲು ಚಿಕಿತ್ಸೆ ನೀಡಲು ಅಮೆರಿಕದ ವಾಕ್ಸೋನಿಕ್ಸ್ (ಗಿಚಿಥಥಿಂಟಿಛಿ) ಮತ್ತು ಭಾರತದ ವಾಕ್ಸೋಜೇನ್ (ಗಿಚಿಥಠಂಜಟಿಜ) ಸಂಸ್ಥೆಗಳು ಜಂಟಿಯಾಗಿ ಕಾರ್ಯನಿರ್ವಹಿಸಲಿವೆ ಎಂದರು. ಎಲ್ಲರಿಗೂ ಒಂದೇ ಔಷಧ ಪರಿಣಾಮಕಾರಿಯಾಗುವುದಿಲ್ಲ. ಚಿಕಿತ್ಸೆಯ ಸಂದರ್ಭದಲ್ಲಿ ಒಂದೇ ಔಷಧವನ್ನು ನೀಡಿದಾಗ ಕೆಲವರಿಗೆ ಉತ್ತಮ ಪ್ರತಿಕ್ರಿಯೆ ದೊರೆಯಬಹುದು. ಆದರೆ ಅದೇ ಔಷಧ ಇತರರಲ್ಲಿ ನಿರೀಕ್ಷಿತ ಪರಿಣಾಮವನ್ನು ಉಂಟುಮಾಡದೇ ಇರಬಹುದು. ಇದಕ್ಕೆ ವ್ಯಕ್ತಿಗಳ ಅನುವಂಶಿಕ ವ್ಯತ್ಯಾಸಗಳು ಸೇರಿದಂತೆ ಹಲವು ಕಾರಣಗಳಿರಬಹುದು. ಆದ್ದರಿಂದ ಔಷಧಕ್ಕೆ ವ್ಯಕ್ತಿಯ ದೇಹ ಏಕೆ ವಿಭಿನ್ನವಾಗಿ ಪ್ರತಿಕ್ರಿಯಿಸುತ್ತದೆ ಎಂಬುದನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ ಪರಿಹಾರ ರೂಪಿಸಲಾಗುವುದು ಎಂದರು.

## ಸರ್ಕಾರಿ ನೌಕರಿ ಅವಧಿ 10-15 ವರ್ಷಕ್ಕೆ ಲಿಮಿಟ್ ಮಾಡಿದ್ರೆ ಹೇಗೆ? ಕುಟುಂಬಕ್ಕೊಂದು ಸರ್ಕಾರಿ ಉದ್ಯೋಗ ಕಲ್ಪಿಸಲು HDK ಹೊಸ ಚಿಂತನೆ!



ಬೆಂಗಳೂರು: ಕರ್ನಾಟಕ ಸೇರಿದಂತೆ ದೇಶದಲ್ಲಿ ನಿರುದ್ಯೋಗದ ಸಮಸ್ಯೆ ತೀವ್ರ ಹೆಚ್ಚುತ್ತಿದ್ದು, ಇದರ ಬೆನ್ನಲ್ಲೇ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರು ಶುಕ್ರವಾರ ಹೊಸ ಚಿಂತನೆಯೊಂದನ್ನು ಹರಿಬಿಟ್ಟಿದ್ದಾರೆ.

ಹೌದು, ಸಾಮಾನ್ಯವಾಗಿ ಎಲ್ಲರೂ ಸರ್ಕಾರಿ ಉದ್ಯೋಗದ ಕನಸು ಕಾಣುತ್ತಾರೆ ಮತ್ತು ಜೀವನವನ್ನು ಉತ್ತಮವಾಗಿ ಸಾಗಿಸಬೇಕೆಂದರೆ ಸರ್ಕಾರಿ ಕೆಲಸದ ಅವಶ್ಯಕತೆ ಇದೆ ಎನ್ನುವುದು ನಮ್ಮ ಜನರ ನಂಬಿಕೆಯಾಗಿದೆ. ಆದರೆ ಸರ್ಕಾರಿ ಕೆಲಸ ಮತ್ತು ಸರ್ಕಾರಿ ಸಂಬಳವನ್ನು ಪಡೆಯಲು ಯೋಗ ಇರಬೇಕು ಎನ್ನುವ ಮಾತಿದೆ.

ಸರ್ಕಾರಿ ಉದ್ಯೋಗದ ಯೋಗವನ್ನು ಎಲ್ಲರಿಗೂ ಕಲ್ಪಿಸಲು ಸರ್ಕಾರಿ ನೌಕರಿಯ ಅವಧಿಯನ್ನೇ 10 ರಿಂದ 15 ವರ್ಷಗಳಿಗೆ ಸೀಮಿತಗೊಳಿಸುವ ಚಿಂತನೆ ಇದೆ. ಹೀಗೆ ಮಾಡಿದ್ರೆ ಪ್ರತಿ ಕುಟುಂಬಕ್ಕೆ ಒಂದು ಸರ್ಕಾರಿ ಉದ್ಯೋಗ ಕಲ್ಪಿಸಲು ಸಾಧ್ಯವೇ? ಎಲ್ಲರೂ ಬದುಕಲು ಸಾಧ್ಯವಾಗುತ್ತದೆಯೇ? ಈ ಯೋಜನೆ ಪ್ರಾಯೋಗಿಕವಾಗಿ ಸಾಧ್ಯವೇ? ಎಂದು ಕುಮಾರಸ್ವಾಮಿ ಅವರು ವಿದ್ಯಾರ್ಥಿಗಳ ಅಭಿಪ್ರಾಯ ಕೇಳಿದ್ದಾರೆ.

ಕುಮಾರಸ್ವಾಮಿ ಅವರು, ಇಂದು ವಿಜಯನಗರದ ಬಂಟರ ಭವನದಲ್ಲಿ, ವಿದ್ಯಾರ್ಥಿಗಳು, ಯುವಕರು, ಕೆಪಿಎಸ್ ಸಿ ಆಯ್ಕೆಯಲ್ಲಿ ಮೋಸ ಹೋದವರು, ಭವಿಷ್ಯದ ಕನಸು ಹೊತ್ತವರು, ಉದ್ಯೋಗ ವಂಚಿತರ ಜೊತೆ ನೇರ ಸಂವಾದ ನಡೆಸಿದರು.

ಈ ವೇಳೆ ನಿರುದ್ಯೋಗ ಸಮಸ್ಯೆ ಬಗೆಹರಿಸುವುದು ನಮ್ಮ ಮೊದಲ ಕಾರ್ಯಕ್ರಮವಾಗಿದೆ ಎಂದು ಹೇಳಿದ ಕುಮಾರಸ್ವಾಮಿ, ಸರ್ಕಾರಿ ನೌಕರರು ಒಮ್ಮೆ ಆಯ್ಕೆಯಾದರೆ 30ರಿಂದ 35 ವರ್ಷಗಳ ಕಾಲ ಖಾಯಂ ಉದ್ಯೋಗದಲ್ಲಿರುತ್ತಾರೆ. ಒಬ್ಬ ವ್ಯಕ್ತಿಗೆ ಇಷ್ಟು ವರ್ಷ ಉದ್ಯೋಗ ಸಿಕ್ಕಾಗ ಆ ವ್ಯಕ್ತಿ ಮತ್ತು ಆತನ ಕುಟುಂಬ ಚೆನ್ನಾಗಿರುತ್ತದೆ. ಆದರೆ ಉದ್ಯೋಗ ಸಿಗದವರು ಏನು ಮಾಡಬೇಕು? ಅಷ್ಟೊತ್ತಿಗೆ ಅವರಿಗೂ ವಯಸ್ಸಾಗಿರುತ್ತದೆ. ಸರ್ಕಾರಿ ಕೆಲಸವೂ ಸಿಗುವುದಿಲ್ಲ. ಹೀಗಾಗಿ ಪ್ರತಿ ಕುಟುಂಬಕ್ಕೆ 1 ಸರ್ಕಾರಿ ಉದ್ಯೋಗ ಸಿಗಲೇಬೇಕೆಂಬ ಕಾರ್ಯಕ್ರಮ ಕೊಡಬೇಕು ಅಂದುಕೊಂಡಿದ್ದೇನೆ ಎಂದರು.

ಮುಂದುವರಿದು? ಸರ್ಕಾರಿ ಉದ್ಯೋಗದ ಅವಧಿಯನ್ನು 10 ರಿಂದ 15 ವರ್ಷಗಳಿಗೆ ಸೀಮಿತಗೊಳಿಸುವ ಯೋಜನೆಯಿದೆ. ಒಬ್ಬ ವ್ಯಕ್ತಿ 10 ರಿಂದ 15 ವರ್ಷ ಕೆಲಸ ಮಾಡಿದ ಬಳಿಕ ನಿವೃತ್ತಿ ನೀಡಿದರೆ, ಆ ಸ್ಥಾನದಲ್ಲಿ ಮತ್ತೊಬ್ಬರಿಗೆ ಉದ್ಯೋಗ ನೀಡಬಹುದು. ನಿವೃತ್ತಿಯಾದವರಿಗೆ ಪಿಂಚಣಿ ಸಿಗುವುದರಿಂದ ಅವರೂ ಬದುಕಬಹುದು. ಜೊತೆಗೆ ಖಾಸಗಿ ಉದ್ಯೋಗವನ್ನೂ ಮಾಡಬಹುದು. ಉದ್ಯೋಗದಿಂದ ವಂಚಿತರಾದ ಮತ್ತೊಬ್ಬರಿಗೂ ಕೆಲಸ ಸಿಗುತ್ತದೆ. ಈ ರೀತಿಯ ವ್ಯವಸ್ಥೆ ಜಾರಿಗೆ ತಂದರೆ ಪ್ರತಿ ಕುಟುಂಬಕ್ಕೆ ಒಂದು ಉದ್ಯೋಗ ಕಲ್ಪಿಸಲು ಸಾಧ್ಯವೇ? ಎಲ್ಲರೂ ಬದುಕಲು ಸಾಧ್ಯವಾಗುತ್ತದೆಯೇ ಎಂಬುದರ ಬಗ್ಗೆ ಯೋಚನೆ ಮಾಡಿ, ಈ ಯೋಜನೆ ಪ್ರಾಯೋಗಿಕವಾಗಿ ಸಾಧ್ಯವೇ ಎಂಬುದರ ಕುರಿತು ನಿಮ್ಮ ಅಭಿಪ್ರಾಯ ತಿಳಿಸುವಂತೆ ವಿದ್ಯಾರ್ಥಿಗಳು ಮತ್ತು ಯುವಕರಲ್ಲಿ ಕುಮಾರಸ್ವಾಮಿ ಮನವಿ ಮಾಡಿದರು.

ಇದಕ್ಕೂ ಮುನ್ನ, 2028ರ ವೇಳೆಗೆ ಜನತೆಯ ಮುಂದಿಡಲು ಕೆಲವು ಕಾರ್ಯಕ್ರಮಗಳಿವೆ. ನನ್ನ ಕಾರ್ಯಕ್ರಮ 2,000 ರೂಪಾಯಿ ಕೊಡುವುದಾಗಲಿ, ಉಚಿತ ಬಸ್ ಸೌಲಭ್ಯ ಕಲ್ಪಿಸುವುದಾಗಲಿ ಅಥವಾ ಯುವನಿಧಿ ನೀಡುವುದಾಗಲಿ ಅಲ್ಲ. 5 ಗ್ಯಾರಂಟಿಗಳಿಗೂ ನನ್ನ ವಿರೋಧವಿಲ್ಲ. ಆದರೆ ಪ್ರತಿ ಕುಟುಂಬ ಸ್ವಾಭಿಮಾನದಿಂದ ಬದುಕುವಂತಾಗಬೇಕು ಎಂದು ಅವರು ಹೇಳಿದರು.

## ನೌಕಾಪಡೆಗೆ ಮತ್ತಷ್ಟು ಬಲ: ಕಾರವಾರ ನೌಕಾನೆಲೆಯಲ್ಲಿ ಸ್ವದೇಶಿ ನಿರ್ಮಿತ ಬೃಹತ್ ನೌಕೆ INS Samarthak ಲೋಕಾರ್ಪಣೆ..!



ಕಾರವಾರ: ಭಾರತೀಯ ನೌಕಾಪಡೆ ಸಾಮರ್ಥ್ಯಕ್ಕೆ ಮತ್ತೊಂದು ಅತ್ಯಾಧುನಿಕ ಗರಿ ಸೇರ್ಪಡೆಯಾಗಿದೆ. ಸಮುದ್ರ ಕಣ್ಗಾವಲಿನಿಂದ ಹಿಡಿದು ವಿಪತ್ತು ಪರಿಹಾರ, ರಕ್ಷಣಾ ಕಾರ್ಯಾಚರಣೆ ಹಾಗೂ ಮಾನವರಹಿತ ತಂತ್ರಜ್ಞಾನಗಳ ಪ್ರಯೋಗದ ವರೆಗೆ ಹಲವು ಜವಾಬ್ದಾರಿಗಳನ್ನು ನಿಭಾಯಿಸಬಲ್ಲ ಭಾರತದ ಸ್ವದೇಶಿ ಬಹುಪಯೋಗಿ ಯುದ್ಧನೌಕೆ ?ಐಎನ್ಎಸ್ ಸಮರ್ಥಕ್? (INS Samarthak) ಅನ್ನು ಕಾರವಾರದ ನೌಕಾನೆಲೆಯಲ್ಲಿ ಲೋಕಾರ್ಪಣೆಗೊಳಿಸಲಾಗಿದೆ.

ಭಾರತದ ಗೌರವಾನ್ವಿತ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಯುದ್ಧ ನೌಕೆಯನ್ನು ದೇಶಕ್ಕೆ ಸಮರ್ಪಿಸಿದರು.

ಭಾರತೀಯ ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್, ಹಿರಿಯ ನೌಕಾಪಡೆ ಮತ್ತು ರಕ್ಷಣಾ ಅಧಿಕಾರಿಗಳು, ರಕ್ಷಣಾ ಸಚಿವಾಲಯದ ಗಣ್ಯರು, ಲಾರ್ಸನ್ ಆ?ಯಂಡ್ ಟೂಬ್ರೊ (ಎಲ್ಆ?ಯಂಡ್ಟಿ) ಸಂಸ್ಥೆಯ ಪ್ರತಿನಿಧಿಗಳು ಹಾಗೂ ಸಂಬಂಧಿತ ಮೂಲ ಉಪಕರಣ ತಯಾರಿಕಾ ಸಂಸ್ಥೆಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ನೌಕೆಯನ್ನು ನೌಕಾಪಡೆಗೆ ಸೇರ್ಪಡೆಗೊಳಿಸಲಾಯಿತು.

ಎಲ್ಆ?ಯಂಡ್ಟಿ ಸಂಸ್ಥೆಯೇ ಐಎನ್ಎಸ್ ಸಮರ್ಥಕ್ ಅನ್ನು ವಿನ್ಯಾಸಗೊಳಿಸಿ ನಿರ್ಮಿಸಿದೆ. ಈ ನೌಕೆಯ ಸೇರ್ಪಡೆ ?ಆತ್ಮನಿರ್ಭರ ಭಾರತ? ಉಪಕ್ರಮದಡಿ ರಕ್ಷಣಾ ಉತ್ಪಾದನಾ ಕ್ಷೇತ್ರದಲ್ಲಿ ಭಾರತದ ಸ್ವಾವಲಂಬನೆ ಹೆಚ್ಚುತ್ತಿರುವುದನ್ನು ಪ್ರತಿಬಿಂಬಿಸುತ್ತದೆ.

ನೌಕೆಯ ಒಟ್ಟು ಬಿಡಿಭಾಗಗಳು ಮತ್ತು ತಂತ್ರಜ್ಞಾನದಲ್ಲಿ ಶೇ.70ಕ್ಕೂ ಹೆಚ್ಚು ಪಾಲು ಸ್ವದೇಶಿ ಉತ್ಪನ್ನಗಳಾಗಿದ್ದು, ಭಾರತೀಯ ರಕ್ಷಣಾ ಸಂಸ್ಥೆಗಳು ಮತ್ತು ಸಣ್ಣ, ಅತಿ ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳ ಸಹಯೋಗದಲ್ಲಿ ಅವುಗಳನ್ನು ಅಭಿವೃದ್ಧಿಪಡಿಸಲಾಗಿದೆ.

100 ಮೀಟರ್‌ಗೂ ಹೆಚ್ಚು ಉದ್ದ ಹೊಂದಿರುವ ಈ ನೌಕೆಯು ಸುಮಾರು 5,000 ಟನ್ ತೂಕವನ್ನು ಸ್ಥಳಾಂತರಿಸುವ ಸಾಮರ್ಥ್ಯ ಹೊಂದಿದೆ. ಅಲ್ಲದೆ, 7,200 ನಾಟಿಕಲ್ ಮೈಲುಗಳಿಗೂ ಅಧಿಕ ದೂರ ಕ್ರಮಿಸುವ ಸಾಮರ್ಥ್ಯ ಹೊಂದಿದೆ.

ಸಮುದ್ರದಲ್ಲಿ ಕಣ್ಗಾವಲು ಮತ್ತು ಗಸ್ತು, ಕಡಿಮೆ ತೀವ್ರತೆಯ ಕಡಲ ಕಾರ್ಯಾಚರಣೆಗಳು, ಗುರಿಗಳ ನಿಯೋಜನೆ, ಪರೀಕ್ಷೆಗಳು, ಮಾನವರಹಿತ ಹಾಗೂ ಸ್ವಾಯತ್ತ ವ್ಯವಸ್ಥೆಗಳ ಕಾರ್ಯಾಚರಣೆ, ವಿಪತ್ತು ಸಂದರ್ಭದಲ್ಲಿ ಮಾನವೀಯ ನೆರವು ಮತ್ತು ಪರಿಹಾರ ಕಾರ್ಯಗಳು (ಎಚ್ಎಡಿಆರ್), ಮುಳುಗಿದ ಹಡಗುಗಳನ್ನು ಮೇಲೆತ್ತುವ ಕಾರ್ಯಾಚರಣೆಗಳಿಗೆ ನೆರವಾಗುವಂತೆ ಇದನ್ನು ವಿನ್ಯಾಸಗೊಳಿಸಲಾಗಿದೆ.

ಈ ನೌಕೆಯಲ್ಲಿ ಅತ್ಯಾಧುನಿಕ ಸಮಗ್ರ ವೇದಿಕೆ ನಿರ್ವಹಣಾ ವ್ಯವಸ್ಥೆ ಮತ್ತು ಸ್ವಯಂಚಾಲಿತ ವಿದ್ಯುತ್ ನಿರ್ವಹಣಾ ವ್ಯವಸ್ಥೆಗಳನ್ನು ಅಳವಡಿಸಲಾಗಿದೆ. ಇವು ಹೆಚ್ಚಿನ ಮಟ್ಟದ ಸ್ವಯಂಚಾಲನೆ ಹಾಗೂ ನೈಜ ಸಮಯದಲ್ಲಿ ಕಾರ್ಯಾಚರಣೆಗಳ ಮೇಲ್ವಿಚಾರಣೆಗೆ ನೆರವಾಗುತ್ತವೆ. ಈ ಸಾಮರ್ಥ್ಯಗಳು ಕಡಲ ಭದ್ರತೆ ಮತ್ತು ವಿಚಕ್ಷಣಾ ಕಾರ್ಯಗಳನ್ನು ಬಲಪಡಿಸುವುದರ ಜೊತೆಗೆ, ವಿಶ್ವಾಸಾರ್ಹ ಭದ್ರತಾ ಪಾಲುದಾರನಾಗಿ ಭಾರತೀಯ ನೌಕಾಪಡೆಯ ಪಾತ್ರವನ್ನು ಮತ್ತಷ್ಟು ವಿಸ್ತರಿಸಲಿವೆ ಎಂದು ನೌಕಾಪಡೆಯ ಅಧಿಕಾರಿಗಳು ತಿಳಿಸಿದ್ದಾರೆ.

ನೌಕೆಯ ಲಾಂಛನದಲ್ಲಿ ಸಮುದ್ರದಿಂದ ಮೇಲೆದ್ದು ಬರುತ್ತಿರುವ ಭಾರತೀಯ ಆನೆಯ ಚಿತ್ರವಿದೆ. ಇದು ಬುದ್ಧಿವಂತಿಕೆ ಮತ್ತು ಶಕ್ತಿಯನ್ನು ಸಂಕೇತಿಸುತ್ತದೆ. ಈ ಹಡಗಿನ ಧ್ಯೇಯವಾಕ್ಯ "ವಿಜಯವೇ ನಮ್ಮ ಏಕೈಕ ಗುರಿ" ಎಂದಾಗಿದೆ. ಹಾಗೆಯೇ, ಇದರ ಸಿಬ್ಬಂದಿಯನ್ನು 'ಪ್ರಚಂಡ ಪುಂಡಿಕ್ಸ್' ಎಂದು ಹೆಸರಿಸಲಾಗಿದೆ.

## ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರು ಇಲ್ಲದಿದ್ದರೆ ಆತಂಕಪಡಬೇಡಿ: ಮಹೇಶ್ವರ್ ರಾವ್



ಬೆಂಗಳೂರು: ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರಿಲ್ಲದಿದ್ದರೂ ಜನರು ಆತಂಕಪಡುವ ಅಗತ್ಯವಿಲ್ಲ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದ್ದಾರೆ.

ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ' (Special Intensive Revision - SIR) ಕುರಿತು ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, "ಅರ್ಹ ಮತದಾರರನ್ನು ಪಟ್ಟಿಗೆ ಸೇರಿಸಲು ಚುನಾವಣಾ ಆಯೋಗವು ವಿಶೇಷ ಅಭಿಯಾನವನ್ನು ಆಯೋಜಿಸಲಿದೆ" ಎಂದು ಹೇಳಿದರು. ಭಾರತೀಯ ಚುನಾವಣಾ ಆಯೋಗದ (ECI) ನಿರ್ದೇಶನದ ಮೇರೆಗೆ, ಮತದಾರರ ಪಟ್ಟಿಯಲ್ಲಿ ಹೊಸ ಹೆಸರುಗಳನ್ನು ಸೇರಿಸಲು ವಿಶೇಷ ಅಭಿಯಾನವನ್ನು ಆಯೋಜಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅವರು ತಿಳಿಸಿದರು. ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಸೇರಿಸಲು ಅರ್ಹರಾದವರು 'ನಮೂನೆ 6' (ಈಂಡಿಟ 6) ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಅವರು ಹೇಳಿದರು.

ಕರಡು ಮತದಾರರ ಪಟ್ಟಿಯಲ್ಲಿ 56,99,660 ಮತದಾರರಿದ್ದಾರೆ ಎಂದು ಅವರು ಮಾಹಿತಿ ನೀಡಿದರು. 2002ರ ಮತದಾರರ ಪಟ್ಟಿಯಲ್ಲಿ ಹೆಸರುಗಳು ಗುರುತಿಸಲು ಸಾಧ್ಯವಾಗದಿರುವುದು ಮತ್ತು ಇತರ ವ್ಯತ್ಯಾಸಗಳ ಕಾರಣದಿಂದಾಗಿ, 24,06,044 ಜನರಿಗೆ ನೋಟಿಸ್ ಜಾರಿ ಮಾಡಲಾಗುತ್ತಿದೆ.

"ಈ ವಿಚಾರಣೆಗಳಲ್ಲಿ ಬಹುಪಾಲು ಈಗಾಗಲೇ ಪೂರ್ಣಗೊಂಡಿವೆ. ಕೇವಲ ವಿಚಾರಣೆಗಳನ್ನು ನಡೆಸುವ ಬದಲು, ಬೂತ್ ಮಟ್ಟದ ಅಧಿಕಾರಿಗಳು (ಃಐಔ) ನೇರವಾಗಿ ಮನೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುವಂತೆ ಚುನಾವಣಾ ಆಯೋಗವು ನಿರ್ದೇಶನ ನೀಡಿದೆ. ಅದರಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ" ಎಂದು ಅವರು ಹೇಳಿದರು.

ಬೆಂಗಳೂರು ನಗರ ಜಿಲ್ಲೆಯಲ್ಲಿ, ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಸೇರಿಸಲು 2.19 ಲಕ್ಷ ಜನರು 'ನಮೂನೆ 6' ಅನ್ನು ಸಲ್ಲಿಸಿದ್ದಾರೆ. 'ನಮೂನೆ 7' ಮತ್ತು 'ನಮೂನೆ 8' ಸೇರಿದಂತೆ ವಿವಿಧ ಅರ್ಜಿಗಳ ಪರಿಶೀಲನೆ ಮತ್ತು ವಿಲೇವಾರಿಯ ನಂತರ, ಸುಮಾರು 2 ಲಕ್ಷ ಮತದಾರರು ಪಟ್ಟಿಗೆ ಸೇರ್ಪಡೆಯಾಗುವ ನಿರೀಕ್ಷೆಯಿದೆ. ಈ ಹಿನ್ನೆಲೆಯಲ್ಲಿ, ನಗರದಲ್ಲಿ ಒಟ್ಟು ಮತದಾರರ ಸಂಖ್ಯೆ ಸುಮಾರು 59 ಲಕ್ಷಕ್ಕೆ ತಲುಪುವ ಸಾಧ್ಯತೆಯಿದೆ ಎಂದು ಅವರು ತಿಳಿಸಿದರು.

ಬೆಂಗಳೂರು ನಗರ ಜಿಲ್ಲೆಯಲ್ಲಿ 'ನಮೂನೆ 7'ರ ಅಡಿಯಲ್ಲಿ ಒಟ್ಟು 5,549 ಅರ್ಜಿಗಳನ್ನು ಸಲ್ಲಿಸಲಾಗಿದ್ದು, ಈ ಪೈಕಿ ಇಲ್ಲಿಯವರೆಗೆ 2,468 ಅರ್ಜಿಗಳನ್ನು ಅನುಮೋದಿಸಲಾಗಿದೆ. ಇದು ಒಟ್ಟು ಅರ್ಜಿಗಳ ಪೈಕಿ ಶೇಕಡಾ 44ರಷ್ಟಿದೆ ಎಂದು ರಾವ್ ಮಾಹಿತಿ ನೀಡಿದರು.

ಬೂತ್ ಮಟ್ಟದ ಏಜೆಂಟ್‌ಗಳು (ಃಐಂ) 'ನಮೂನೆ 7'ರ ಅಡಿಯಲ್ಲಿ ಗರಿಷ್ಠ 10 ಅರ್ಜಿಗಳನ್ನು ಮಾತ್ರ ಸಲ್ಲಿಸಲು ಅವಕಾಶವಿದೆ ಎಂದು ಅವರು ಹೇಳಿದರು. ಒಂದು ವೇಳೆ ಸಲ್ಲಿಸಿದ ಅರ್ಜಿಗಳ ಸಂಖ್ಯೆ ಈ ಮಿತಿಯನ್ನು ಮೀರಿದರೆ, ಅವುಗಳನ್ನು ಪರಿಶೀಲನೆಗೆ ಒಳಪಡಿಸಲಾಗುವುದು ಮತ್ತು ನಿಯಮಗಳ ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು. ಈ ಸಂಬಂಧ, ಮಲ್ಲೇಶ್ವರಂನಲ್ಲಿ 'ಫಾರ್ಮ್ 7' (ಈಂಡಿಟ 7) ಅಡಿಯಲ್ಲಿ ಸಲ್ಲಿಕೆಯಾದ 1,103 ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಇತರ ಪ್ರದೇಶಗಳಲ್ಲಿ ಸಲ್ಲಿಕೆಯಾದ ಸಾಮೂಹಿಕ ಅರ್ಜಿಗಳನ್ನು ಸಹ ಪರಿಶೀಲಿಸಲಾಗುತ್ತಿದ್ದು, ನಿಯಮಗಳ ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು.

## ಕೋಟ್ಯಂತರ ರೂ. ವೆಚ್ಚದ ನೂತನ ಸೇತುವೆ ಹಾಗೂ ರಸ್ತೆ ಕಾಮಗಾರಿಗೆ ಶಾಸಕ ಹೆಚ್.ಟಿ.ಮಂಜು ಗುದ್ದಲಿ ಪೂಜೆ



ಕೆ.ಆರ್.ಪೇಟೆ, ಅ.16: ತಾಲ್ಲೂಕಿನ ಚಂದಗೋನಹಳ್ಳಮ್ಮ ದೇವಸ್ಥಾನ ಹಾಗೂ ಬೀರುವಳ್ಳಿ ಮಧ್ಯೆ ಇರುವ ಸೇತುವೆ ನಿರ್ಮಾಣ ಕಾಮಗಾರಿ ಹಾಗೂ ತಾಲ್ಲೂಕಿನ ಮಂಚಿಬೀಡು-ಹೇಮಗಿರಿ ರಸ್ತೆ ಮಾರ್ಗದ ಚಂದಗೋನಹಳ್ಳಿ ಅಮ್ಮನ ದೇವಸ್ಥಾನದ ಸಮೀಪ ನೂತನ ಸೇತುವೆ ನಿರ್ಮಾಣ ಕಾಮಗಾರಿಗೆ ಹಾಗೂ ಮಂಚೀಬೀಡು ಗ್ರಾಮದಲ್ಲಿ ರಸ್ತೆ ಕಾಮಗಾರಿಗೆ ಕ್ಷೇತ್ರದ ಜನಪ್ರಿಯ ಶಾಸಕ *ಹೆಚ್.ಟಿ. ಮಂಜು* ಅವರು ಗುರುವಾರ ಗುದ್ದಲಿ ಪೂಜೆ ನೆರವೇರಿಸಿದರು.

ಹೊಳೆನರಸೀಪುರ ತಾಲ್ಲೂಕಿನ ಗಡಿಯಿಂದ ಕೆ.ಆರ್.ಪೇಟೆ ತಾಲ್ಲೂಕಿಗೆ ಸಂಪರ್ಕ ಕಲ್ಪಿಸುವ *ಕೆ. ಆರ್.ಪಿ. 198ರ 5.40 ಕಿ.ಮೀ. ವ್ಯಾಪ್ತಿಯಲ್ಲಿ* ಈ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು.

ಗುಣಮಟ್ಟದ ಕಾಮಗಾರಿಗೆ ಸೂಚನೆ

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಹೆಚ್.ಟಿ.ಮಂಜು ಅವರು, ಈ ಭಾಗದ ರಸ್ತೆ ಮತ್ತು ಸೇತುವೆ ನಿರ್ಮಾಣದಿಂದ ಸುತ್ತಮುತ್ತಲಿನ ಹಲವು ಗ್ರಾಮಗಳ ಜನರಿಗೆ ಸಂಚಾರಕ್ಕೆ ಹೆಚ್ಚಿನ ಅನುಕೂಲವಾಗಲಿದೆ. ಗ್ರಾಮೀಣ ಪ್ರದೇಶಗಳ ರಸ್ತೆ ಸಂಪರ್ಕ ಸುಧಾರಣೆಗೆ ಆದ್ಯತೆ ನೀಡಲಾಗುತ್ತಿದ್ದು, ಗುಣಮಟ್ಟದ ಕಾಮಗಾರಿ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಈ ನೂತನ ಸೇತುವೆ ನಿರ್ಮಾಣದಿಂದಾಗಿ ದಿನನಿತ್ಯ ಸಂಚರಿಸುವ ಶ್ರೀಚಂದಗೋನಹಳ್ಳಮ್ಮ ಕ್ಷೇತ್ರಕ್ಕೆ ಬರುವ ಲಕ್ಷಾಂತರ ಭಕ್ತಾದಿಗಳಿಗೆ ಹಾಗೂ ರೈತರು, ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳ ಸುಲಭ ಸಂಚಾರಕ್ಕೆ ಹಾದಿ ಸುಗಮವಾಗಲಿದೆ ಎಂದರು.

**2028ಕ್ಕೆ ನಾನೇ ಅಭ್ಯರ್ಥಿ: ಹೆಚ್.ಟಿ.ಮಂಜು ಸ್ಪಷ್ಟನೆ**

ಇದೇ ವೇಳೆ ರಾಜಕೀಯ ವಿಚಾರ ಪ್ರಸ್ತಾಪಿಸಿದ ಶಾಸಕರು, *ಮುಂದಿನ 2028 ಕ್ಕೆ ನಾನೇ ಜೆಡಿಎಸ್-ಬಿಜೆಪಿ ಮೈತ್ರಿ ಅಭ್ಯರ್ಥಿ ಆಗುವುದು ಖಚಿತ. ಅದೇ ರೀತಿ ನಾನು ಶಾಸಕ ಆಗುವುದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಕೆಲವು ಊಹಾಪೋಹಗಳಿಗೆ ಯಾರೂ ಕಿವಿಗೊಡಬಾರದು* ಎಂದು ಸ್ಪಷ್ಟಪಡಿಸಿದರು. ಶಾಸಕರ ಈ ಹೇಳಿಕೆ ಗ್ರಾಮಸ್ಥರಲ್ಲಿ ಹರ್ಷ ಮೂಡಿಸಿದೆ. ಕ್ಷೇತ್ರದ ಅಭಿವೃದ್ಧಿಗೆ ಕಾಂಗ್ರೆಸ್ ಸರಕಾರವು ನಿರೀಕ್ಷಿತ ಅನುಧಾನ ನೀಡುತ್ತಿಲ್ಲ. ಇದರಿಂದ ಕ್ಷೇತ್ರದ ಅಭಿವೃದ್ದಿಯು ನನ್ನ ಹಾಗೂ ಕ್ಷೇತ್ರದ ಮತದಾರರ ನಿರೀಕ್ಷೆಗೆ ತಕ್ಕಂತೆ ಆಗುತ್ತಿಲ್ಲ. ಕ್ಷೇತ್ರದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ನನಗೆ ಇನ್ನೊಂದು ಅವಧಿಗೆ ಅವಕಾಶ ನೀಡಬೇಕಾಗಿದೆ. ನಾನು ನನ್ನ ಶತ್ರುವಿಗೂ ಕೇಡು ಬಯಸುವುದಿಲ್ಲ. ನನ್ನ ವಿರುದ್ದ ಯಾರೇ ಕೆಟ್ಟದಾಗಿ ಮಾತನಾಡಿದರೂ ಅದನ್ನು ಪ್ರೀತಿಯಿಂದಲೇ ಸ್ವೀಕರಿಸುತ್ತೇನೆ ಟೀಕಿಸುವವರ ಮನಸ್ಸು ಗೆಲ್ಲುವಂತೆ ಕ್ಷೇತ್ರದ ಅಭಿವೃದ್ಧಿ ಮಾಡಬೇಕೆಂಬುದು ನನ್ನ ಉದ್ದೇಶವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಅಕ್ಕಿಹೆಬ್ಬಾಳು ಹೋಬಳಿ ಜೆಡಿಎಸ್ ಅಧ್ಯಕ್ಷ ಬಸವಲಿಂಗಪ್ಪ, ತಾಲೂಕು ಪಂಚಾಯತ್ ಮಾಜಿ ಅಧ್ಯಕ್ಷ ಕೃಷ್ಣೇಗೌಡ, ಬೀರುವಳ್ಳಿ ಸೊಸೈಟಿ ಅಧ್ಯಕ್ಷ ಎನ್.ಎನ್.ಜಗದೀಶ್, ನಟೇಶ್, ಈರೇಗೌಡ, ಲಕ್ಷ್ಮಣ್, ಬಿ.ಎನ್.ಕುಮಾರ್, ಪರಶುರಾಮ್, ದೊಡ್ಡಕಾಡನೂರು ಹೇಮಾವತಿ ನೀರಾವರಿ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರಾಜೇಶ್, ಸಹಾಯಕ ಇಂಜಿನಿಯರ್ ರವಿ ಕುಮಾರ್ ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳು, ಪ್ರಮುಖ ಮುಖಂಡರು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಉಪಸ್ಥಿತರಿದ್ದರು.

## ಲಾರಿ ಬಸ್ ಮುಖಾಮುಖಿ ಡಿಕ್ಕಿ ನಾಲ್ವರ ದುರ್ಮರಣ.,



ಪಿರಿಯಾಪಟ್ಟಣ : ತಾಲೂಕಿನ ಕಿರನಲ್ಲಿ ಗೇಟ್ ಬಳಿ ಶುಕ್ರವಾರ ಬೆಳಗಿನ ಜಾವ ಸುಮಾರು 3.30 ರ ಸಮಯದಲ್ಲಿ ಬಿ.ಎಂ ರಸ್ತೆಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಖಾಸಗಿ ಬಸ್ ಹಾಗೂ ಲಾರಿ ನಡುವೆ ಡಿಕ್ಕಿ ಹೊಡೆದ ಪರಿಣಾಮ ನಾಲ್ವರು ಮೃತಪಟ್ಟಿದ್ದು, 35 ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿರುವ ಘಟನೆ ನಡೆದಿದೆ.

ಬೆಂಗಳೂರಿನಿಂದ ಕೇರಳದತ್ತ ತೆರಳುತ್ತಿದ್ದ ಖಾಸಗಿ ಸ್ಲೀಪರ್ ಕೋಚ್ ಬಸ್ ಮತ್ತು ಲಾರಿ ನಡುವೆ ಡಿಕ್ಕಿ ಸಂಭವಿಸಿದ್ದು, ಅಪಘಾತದಲ್ಲಿ

ಸುನಿಲ್ (28) ಬಿನ್ ಶ್ರೀನಿವಾಸ್

ಮೈಸೂರು ಇವರು

ಖಾಸಗಿ ಬಸ್ ಡ್ರೈವರ್, ಸಗೇಶ್ (30 ವರ್ಷ)

ಬಸ್ ಕ್ಲೀನರ್.

ಕೇರಳ ಮೂಲದ ವ್ಯಕ್ತಿಯಾಗಿದ್ದಾರೆ.

ಅಫ್ತಾಬ್ (26 ವರ್ಷ) ಕೇರಳದ ಕ್ಯಾಲಿಕಟ್ ನಿವಾಸಿ ಹಾಗೂ ಶಿಬಿಲ್ ಆಡಮ್ (32)ಬಿನ್ ಆಡಂ ಕುನ್ನಿಕದನ್ ಕೇರಳ ರಾಜ್ಯದವರಾಗಿದ್ದಾರೆ. ಶುಕ್ರವಾರ ಬೆಳಗಿನ ಜಾವ 3:30 ರ ಸಮಯದಲ್ಲಿ ಮೈಸೂರು ಕಡೆಯಿಂದ ಕೇರಳದತ್ತ ತೆರಳುತ್ತಿದ್ದ ಸ್ಲೀಪರ್ ಕೋಚ್ ಬಸ್ ಹಾಗೂ ಪಿರಿಯಾ ಪಟ್ಟಣದಿಂದ ಮೈಸೂರು ಕಡೆಗೆ ಸಾಗುತ್ತಿದ್ದ ಲಾರಿ ಬಿ.ಎಂ.ರಸ್ತೆಯ ಕಿರನಲ್ಲಿ ಗೇಟ್ ಸಮೀಪ ಮುಖಾಮುಖಿಯಾಗಿ ಡಿಕ್ಕಿ ಹೊಡೆದಿವೆ ಎನ್ನಲಾಗಿದೆ. ಡಿಕ್ಕಿಯ ರಭಸಕ್ಕೆ ಬಸ್ ಜಖಂಗೊಂಡಿದ್ದು, ಅದರೊಳಗಿದ್ದ ಪ್ರಯಾಣಿಕರಿಗೆ ಬೆನ್ನುಮೂಳೆ, ಕೈಕಾಲು, ಸೊಂಟ ಸೇರಿದಂತೆ ದೇಹದ ವಿವಿಧ ಭಾಗಗಳಲ್ಲಿ ಗಂಭೀರ ಗಾಯಗಳಾಗಿವೆ. ಬಸ್ ಚಾಲಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ. ಉಳಿದ ಮೃತರ ಗುರುತು ಮತ್ತು ಅಪಘಾತದ ಸಂಪೂರ್ಣ ವಿವರಗಳ ಕುರಿತು ಅಧಿಕೃತ ಮಾಹಿತಿ ಲಭ್ಯವಾದಂತೆ ಸ್ಪಷ್ಟವಾಗಬೇಕಿದೆ.

ರಕ್ಷಣಾ ಕಾರ್ಯಾಚರಣೆ : ಅಪಘಾತ ಸಂಭವಿಸಿದ ತಕ್ಷಣ ಸ್ಥಳೀಯ ನಿವಾಸಿಗಳು, ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ಆರಂಭಿಸಿದರು.

ಅಪಘಾತದ ತೀವ್ರತೆಗೆ ಬಸ್ ಜಖಂಗೊಂಡಿದ್ದರಿಂದ ಒಳಗೆ ಸಿಲುಕಿದ್ದ ಪ್ರಯಾಣಿಕರನ್ನು ಹೊರತೆಗೆದು ಗಾಯಾಳುಗಳನ್ನು ರಕ್ಷಿಸುವುದು ಸವಾಲಿನ ಕೆಲಸವಾಗಿತ್ತು. ಈ ವೇಳೆ ಬಸ್‌ನ ತುರ್ತು ನಿರ್ಗಮನ ಬಾಗಿಲನ್ನು ತೆರೆದು ಪ್ರಯಾಣಿಕರನ್ನು ಹೊರಗೆ ಕರೆತರಲಾಯಿತು.

ಬಸ್ ಚಾಲಕನ ಮೃತ ದೇಹದ ಒಂದು ಕಾಲು ಬಸ್‌ನೊಳಗೆ ಸಿಲುಕಿಕೊಂಡಿದ್ದರಿಂದ ಅದನ್ನು ಹೊರತೆಗೆಯಲು ರಕ್ಷಣಾ ಸಿಬ್ಬಂದಿ ಹೆಚ್ಚುವರಿ ಕಾರ್ಯಾಚರಣೆ ನಡೆಸಬೇಕಾಯಿತು ಎಂದು ತಿಳಿಸಲಾಗಿದೆ. ಸ್ಥಳೀಯರು ಕೂಡ ರಕ್ಷಣಾ ಕಾರ್ಯಕ್ಕೆ ನೆರವು ನೀಡಿದರು.

ಆಸ್ಪತ್ರೆಗಳಿಗೆ ಗಾಯಾಳುಗಳ ರವಾನೆ :

ಗಾಯಗೊಂಡ ಪ್ರಯಾಣಿಕರನ್ನು ಆಂಬುಲೆನ್ಸ್‌ಗಳ ಮೂಲಕ ಪಿರಿಯಾಪಟ್ಟಣ ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಲಾಯಿತು. ಅಲ್ಲಿನ ವೈದ್ಯರು ಗಾಯಾಳುಗಳ ಆರೋಗ್ಯ ಸ್ಥಿತಿಯನ್ನು ಪರಿಶೀಲಿಸಿ ಪ್ರಾಥಮಿಕ ಚಿಕಿತ್ಸೆ ನೀಡಿದರು. ಗಂಭೀರವಾಗಿ ಗಾಯಗೊಂಡವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆ ಸೇರಿದಂತೆ ವಿವಿಧ ಆಸ್ಪತ್ರೆಗಳಿಗೆ ರವಾನಿಸಲಾಗಿದೆ

ಬಸ್‌ನಲ್ಲಿ ಪ್ರಯಾಣಿಸುತ್ತಿದ್ದವರು ಕೇರಳ ಮೂಲದವರು ಎಂದು ಪ್ರಾಥಮಿಕ ಮಾಹಿತಿಯಲ್ಲಿ ತಿಳಿಸಲಾಗಿದೆ. ಗಾಯಾಳುಗಳಲ್ಲಿ ಕೆಲವರ ಸ್ಥಿತಿ ಗಂಭೀರವಾಗಿರುವುದರಿಂದ ವೈದ್ಯಕೀಯ ಸಿಬ್ಬಂದಿ ತುರ್ತು ಚಿಕಿತ್ಸೆ ನೀಡುತ್ತಿದ್ದಾರೆ. ಲಾರಿ ಚಾಲಕ ಸೇರಿದಂತೆ ಇತರರಿಗೆ ಗಾಯಗಳಾಗಿವೆಯೇ ಎಂಬುದರ ಕುರಿತು ಹೆಚ್ಚಿನ ದೃಢೀಕೃತ ಮಾಹಿತಿ ಅಗತ್ಯವಿದೆ.

ಹೆದ್ದಾರಿಯಲ್ಲಿ ವಾಹನ ಸಂಚಾರಕ್ಕೆ ಅಡ್ಡಿ : ಅಪಘಾತದ ಪರಿಣಾಮ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನ ಸಂಚಾರ ದಟ್ಟಣೆ ಉಂಟಾಯಿತು. ರಸ್ತೆಯುದ್ದಕ್ಕೂ ವಾಹನಗಳು ಸಾಲುಗಟ್ಟಿ ನಿಂತಿದ್ದರಿಂದ ಪ್ರಯಾಣಿಕರು ಹಾಗೂ ವಾಹನ ಸವಾರರು ತೊಂದರೆ ಅನುಭವಿಸಿದರು. ಬಳಿಕ ಕ್ರೇನ್ ಮತ್ತು ಜೆಸಿಬಿ ಯಂತ್ರಗಳ ನೆರವಿನಿಂದ ಅಪಘಾತಕ್ಕೀಡಾದ ಬಸ್ ಹಾಗೂ ಲಾರಿಯನ್ನು ರಸ್ತೆಯ ಬದಿಗೆ ಸ್ಥಳಾಂತರಿಸಿ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು. ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು ಮೃತ ದೇಹಗಳನ್ನು ಪಿರಿಯಾಪಟ್ಟಣದ ಶವಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬ ವರ್ಗದವರಿಗೆ ಹಸ್ತಾಂತರಿಸಲಾಗಿದೆ.

## ತಿಪ್ಪೇನಹಳ್ಳಿ ಗ್ರಾಮದಲ್ಲಿ ಮುಖ್ಯ ರಸ್ತೆ ಬ್ರಿಡ್ಜ್ ಉದ್ಘಾಟನೆ ಶಾಸಕ ಎಸ್.ಟಿ. ಸೋಮಶೇಖರ್ ಗೌಡ,





ಬೆಂಗಳೂರು : ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ರಸ್ತೆ, ಬ್ರಿಡ್ಜ್ ಹಾಗೂ ಮೂಲಸೌಕರ್ಯಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದೆ. ಸಾರ್ವಜನಿಕರಿಗೆ ಸುಗಮ ಸಂಚಾರ ಕಲ್ಪಿಸುವುದು ಮತ್ತು ಗ್ರಾಮದಲ್ಲಿ ಉತ್ತಮ ಮೂಲಸೌಕರ್ಯಗಳನ್ನು ಒದಗಿಸುವುದು ನಮ್ಮ ಉದ್ದೇಶವಾಗಿದೆ. ಪಾರ್ಕ್‌ನಲ್ಲಿ ದೀಪಗಳ ವ್ಯವಸ್ಥೆ ಕಲ್ಪಿಸಿರುವುದರಿಂದ ಸಂಜೆ ವೇಳೆ ವಾಯುವಿಹಾರಕ್ಕೆ ಬರುವ ಸಾರ್ವಜನಿಕರಿಗೆ ಅನುಕೂಲವಾಗಲಿದೆ. ಮುಂದಿನ ದಿನಗಳಲ್ಲಿಯೂ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು", ಎಂದು ಯಶವಂತಪುರ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಮಾಜಿ ಸಚಿವರಾದ ಎಸ್.ಟಿ. ಸೋಮಶೇಖರ್ ಗೌಡ ಹೇಳಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ತಿಪ್ಪೇನಹಳ್ಳಿ ಮುಖ್ಯ ರಸ್ತೆಯ ಬ್ರಿಡ್ಜ್ ಹಾಗೂ ಪಾರ್ಕ್‌ನಲ್ಲಿ ಅಳವಡಿಸಿರುವ ದೀಪಗಳ ಉದ್ಘಾಟನೆ ಮಾಡಿ ಅವರು ಮಾತನಾಡಿದರು.

ಈ ವೇಳೆ ಉದ್ಘಾಟನೆ ಕಾರ್ಯ ಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅಂದ್ರಹಳ್ಳಿ ವಾರ್ಡಿನ ಕಾಂಗ್ರೆಸ್ ಪ್ರಭಾವಿ ನಾಯಕ ಹಾಗೂ ಜಿಬಿಎ ಪ್ರಬಲ ಆಕಾಂಕ್ಷಿ ಅಭ್ಯರ್ಥಿ ಪ್ರಕಾಶ್ ಟಿ.ಅವರು, "ಜನರ ಅಗತ್ಯಗಳನ್ನು ಅರಿತು ಅಭಿವೃದ್ಧಿ ಕಾರ್ಯಗಳಿಗೆ ಸ್ಪಂದಿಸುವ ಜನಪ್ರತಿನಿಧಿಗಳಿಂದ ಕ್ಷೇತ್ರದ ಪ್ರಗತಿ ಸಾಧ್ಯ.ನಮ್ಮ ನಾಯಕರಾದ ಎಸ್.ಟಿ. ಸೋಮಶೇಖರ್ ಗೌಡ್ರು ಕ್ಷೇತ್ರದ ಅಭಿವೃದ್ಧಿಗೆ ಇದೇ ರೀತಿಯ ಆದ್ಯತೆ ನೀಡುತ್ತಾ, ಸಾರ್ವಜನಿಕರ ಸಮಸ್ಯೆಗಳಿಗೆ ನಿರಂತರವಾಗಿ ಸ್ಪಂದಿಸುತ್ತಿದ್ದಾರೆ. ತಿಪ್ಪೇನಹಳ್ಳಿ ಗ್ರಾಮದ ಮುಖ್ಯ ರಸ್ತೆ ಬ್ರಿಡ್ಜ್ ಮತ್ತು ಪಾರ್ಕ್‌ಗೆ ದೀಪಗಳ ವ್ಯವಸ್ಥೆ ಕಲ್ಪಿಸಿರುವುದರಿಂದ ಸ್ಥಳೀಯ ನಿವಾಸಿಗಳಿಗೆ ಅನುಕೂಲವಾಗಲಿದೆ. ಇಂತಹ ಅಭಿವೃದ್ಧಿ ಕಾರ್ಯಗಳು ಜನರ ದೈನಂದಿನ ಜೀವನಕ್ಕೆ ನೆರವಾಗುವುದರ ಜೊತೆಗೆ ಗ್ರಾಮಗಳ ಅಭಿವೃದ್ಧಿಗೂ ಸಹಕಾರಿಯಾಗುತ್ತವೆ", ಎಂದು ಪ್ರಕಾಶ್ ಟಿ ಅವರು ಶಾಸಕ ಎಸ್ ಟಿ ಸೋಮಶೇಖರ್ ಅವರನ್ನು ಹಾಡಿ ಹೊಗಳಿದರು.

# ಬಿಜೆಪಿಯನ್ನು ಹೋಳು ಮಾಡಿದ ಸಂಸದ ಸುಧಾಕರ್

## ಗೌರಿಬಿದನೂರಿನಲ್ಲಿ ಮಾಜಿ ಸಚಿವ ಶಿವಶಂಕರರೆಡ್ಡಿ ಟೀಕೆ



**ಸ್ಕಂದಗಿರಿ ವಾಣಿ ಸುದ್ದಿಜಾಲ**
**ಗೌರಿಬಿದನೂರು:** ಸಂಸದ ಡಾ. ಕೆ.ಸುಧಾಕರ್ ಇಡೀ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿಯನ್ನು ಎರಡು ಹೋಳು ಮಾಡಿದ್ದಾರೆ. ನಮ್ಮ ಕ್ಷೇತ್ರದಲ್ಲೂ ಗುಂಪುಗಳನ್ನು ಮಾಡಿದ್ದಾರೆ. ಇವರು ವೇದಿಕೆ ಮೇಲೆ ಆಡುವ ಮಾತುಗಳಿಗೆ ತಕ್ಕಂತೆ ನಡೆದುಕೊಳ್ಳಲಿ ಎಂದು ಮಾಜಿ ಸಚಿವ ಎನ್.ಎಚ್. ಶಿವಶಂಕರರೆಡ್ಡಿ ಆರೋಪ ಮಾಡಿದ್ದಾರೆ.

ನಗರದ ಪ್ರಸನ್ನ ಆಂಜನೇಯಕಲ್ಯಾಣ ಮಂಟಪದಲ್ಲಿ ಏರ್ಪಡಿಸಿದ್ದ ಆಗ್ನೇಯ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪರ ಚುನಾವಣಾ ಸಭೆಯಲ್ಲಿ ಮಾತನಾಡಿ, ಸುಧಾಕರ್ ನಮ್ಮ ಪಕ್ಷದ ಬಗ್ಗೆ ಬುಧವಾರ ನಗರದಲ್ಲಿ ನಡೆದ ಸಭೆಯಲ್ಲಿ ಟೀಕೆ ಮಾಡಿದ್ದಾರೆ. ಅವರು ನಮ್ಮ ಪಕ್ಷದ ಬಗ್ಗೆ ಮಾತನಾಡುವುದಿಲ್ಲ, ಅವರು ಮಾಡುತ್ತಿರುವುದೇನು ಎಂದು ಪ್ರಶ್ನಿಸಿದರು.

ತಾಲೂಕಿನಲ್ಲಿ ಬಿಜೆಪಿ ಎಂದಿಗೂ ಒಂದಾಗಲಾರದ ಸ್ಥಿತಿ ನಿರ್ಮಾಣ ಮಾಡಿದ್ದಾರೆ. ಇಡೀ ಲೋಕಸಭಾ ಕ್ಷೇತ್ರದಲ್ಲಿ ಹೀಗೆ ಮಾಡಿದ್ದಾರೆ. ಮೊದಲು ಅವರ ಪಕ್ಷ ಸರಿದೂಗಿಸಿಕೊಳ್ಳಲಿ ಎಂದು ಕಿಡಿ ಕಾರಿದರು.

ಪಕ್ಷದ ಕಾರ್ಯಕರ್ತರು ಪದವೀಧರ ಕ್ಷೇತ್ರದ ಪ್ರತಿಯೊಬ್ಬ ಮತದಾರರನ್ನು ಭೇಟಿ ಮಾಡಿ ಪಕ್ಷಕ್ಕೆ ಮತ ಹಾಕುವಂತೆ ಒಲಿಸಬೇಕು. ಅವರನ್ನು ಭೇಟಿ ಮಾಡಿದ್ದಕ್ಕೆ ಸಾಕ್ಷಿಯಾಗಿ ಅವರೊಂದಿಗೆ ಫೋಟೋ ತೆಗೆದು ಪಕ್ಷದ ಸಾಮಾಜಿಕ ಜಾಲ ತಾಣಕ್ಕೆ ಹಾಕಬೇಕು ಎಂದು ಹೇಳಿದರು.

ಈ ಚುನಾವಣೆ ಅನುಸರಿಸಿಕೊಂಡು ತಾ.ಪಂ, ಜಿ.ಪಂ, ಗ್ರಾ.ಪಂ, ನಗರಸಭೆ ಚುನಾವಣೆಗಳು ಬರಲಿವೆ. ಇವುಗಳೆಲ್ಲಾ ಟೆಸ್ಟ್ ಇದ್ದಂತೆ. ಇವುಗಳಾದ ಮೇಲೆ ಬರುವ ಮೇನ್ ಎಕ್ಸಾಮ್ ವಿಧಾನ ಸಭಾ ಚುನಾವಣೆ. ಈ ಟೆಸ್ಟ್‌ಗಳಲ್ಲಿ ಪಾಸ್ ಆದರೆ ಮೇನ್ ಎಕ್ಸಾಮ್ ಸುಲಭವಾಗುತ್ತದೆ. ಆದ್ದರಿಂದಲೇ ಮಕ್ಕಳು ಪರೀಕ್ಷೆಗೆ ತಯಾರಿ ನಡೆಸಿದಂತೆ ನಾವು ಸಿದ್ಧತೆಗಳನ್ನು ಮಾಡಿಕೊಂಡು ವಿಧಾನ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಬಾವುಟ ಹಾರಿಸಬೇಕೆಂದು.

ಮುಂದೂರುವ ಚುನಾವಣೆಗಳಲ್ಲಿ ಯುವಕರಿಗೆ, ಹೊಸಬರಿಗೆ ಅವಕಾಶ ಮಾಡಿಕೊಡಲಾಗುವುದು. ಯಾವುದೇ ಒತ್ತಡಕ್ಕೆ ಮಣಿಯುವುದಿಲ್ಲ. ನಮಗೆ ವಯಸ್ಸಾಗಿದೆ, ಯುವಕರು ಮುಂದೆ ಬರಬೇಕು. ಹೊಸ ನಾಯಕತ್ವ ಬೆಳೆಯಬೇಕು. ಜಾತಿ ಮತಗಳನ್ನು ಪರಿಗಣನೆಗೆ ತೆಗೆದುಕೊಂಡು ಸಾಮಾಜಿಕ ನ್ಯಾಯ ಎತ್ತಿ ಹಿಡಿಯಬೇಕು. ಬಡವರ ಕೆಲಸ ಮಾಡುವವರಿಗೆ, ಜನರೊಂದಿಗೆ ಇರುವವರಿಗೆ ಅವಕಾಶ ಮಾಡಿಕೊಡಲಾಗುವುದು ಎಂದರು.

ಕಾಂಗ್ರೆಸ್ ಪಕ್ಷ ಬಿಟ್ಟು ಹೋಗಿದ್ದವರಿಗೆ ಮುಕ್ತಾ ಅಹ್ವಾನ ಪಕ್ಷ ಬಿಟ್ಟು ಹೋಗಿರುವವರು ಮರಳಿ ಬಂದರೆ ಅವಕಾಶ ನೀಡುತ್ತೇನೆ. ಯಾರ ವಿಷಯದಲ್ಲೂ ದ್ವೇಷ ಮಾಡುವುದಿಲ್ಲ. ದ್ವೇಷ ನಾಶ ಮಾಡುತ್ತೇನೆ, ತಾಯಿ ಪಕ್ಷಕ್ಕೆ ಬರುವವರಿಗೆ ಸದಾ ಸ್ವಾಗತ. ಅಲ್ಲಿಗೆ ಹೋದವರಿಗೆ ಆಗುತ್ತಿರುವ ಸಮಸ್ಯೆಯ ಬಗ್ಗೆ ನನಗೆ ಅರಿವಿದೆ. ಕೆಲವರು ಬಂದಿದ್ದಾರೆ, ಉಳಿದವರನ್ನು ಬರಮಾಡಿಕೊಳ್ಳಲು ಬಯಸಿದ್ದೇನೆ ಎಂದು ಶಿವಶಂಕರರೆಡ್ಡಿ ಹೇಳಿದರು.

ಮುಖಂಡರಾದ ಭಾರ್ಗವರೆಡ್ಡಿ, ವೆಂಕಟರಮಣ, ವಿ.ರಮೇಶ್, ಅಶ್ವತ್ಥನಾರಾಯಣಗೌಡ, ಗಿರೀಶರೆಡ್ಡಿ, ಶ್ರೀನಿವಾಸ್, ರಫೀಕ್, ರಮೇಶ್, ಗಂಗಿ, ಕಲ್ಪನಾ, ಕೆಂಚಂಬಳಿ ವೆಂಕಟೇಶ್, ಜಯರಾಮ್, ನರಸಿಂಹಮೂರ್ತಿ, ರಮೇಶ್ ನಾಯಕ್, ಲಕ್ಷ್ಮೀನಾರಾಯಣಪ್ಪ, ಅಮರ್, ಮಂಜುನಾಥ, ವೆಂಕಟಾದ್ರಿ ಇದ್ದರು.

# ಹೈನು ರೈತರ ಬಗ್ಗೆ ಕನಿಕರ ಇಲ್ಲದ ರಾಜ್ಯ ಸರ್ಕಾರ!

## ಕಳಪೆ ಗುಣಮಟ್ಟದ ಪಶು ಆಹಾರ ಪೂರೈಕೆ ಕಣ್ಣುಮುಚ್ಚಿ ಕುಳಿತ ಕೆಎಂಎಫ್



**ಸ್ಕಂದಗಿರಿ ವಾಣಿ ಸುದ್ದಿಜಾಲ**
**ಚಿಕ್ಕಬಳ್ಳಾಪುರ:** ತೀವ್ರ ಬರದಿಂದ ತತ್ತರಿಸಿರುವ ರೈತರು ಜಾನುವಾರುಗಳನ್ನು ಕಾಪಾಡಿಕೊಳ್ಳಲು ಮೇವು ಮತ್ತು ನೀರಿಗಾಗಿ ಪರದಾಡುತ್ತಿರುವ ಸಂದರ್ಭದಲ್ಲಿ ಕಳಪೆ ಗುಣಮಟ್ಟದ ಪಶು ಆಹಾರ ಪೂರೈಕೆ ಮಾಡುವ ಮೂಲಕ ಹೈನು ರೈತರ ಜೀವನಕ್ಕೆ ಕಲ್ಲು ಹಾಕುವ ಕೆಲಸವನ್ನು ಪಶುಆಹಾರ ತಯಾರಕರು ಮಾಡುತ್ತಿದ್ದು, ಈ ಬಗ್ಗೆ ದೂರು ನೀಡಿದರೂ ಕೆಎಂ ಎಫ್ ಕ್ರಮ ವಹಿಸದಿರುವುದನ್ನು ಖಂಡಿಸಿ ಶನಿವಾರ ಪಶು ಆಹಾರ ತಯಾರಿಕಾ ಘಟಕದ ಮುಂದೆ ಪ್ರತಿಭಟನೆ ಹಮ್ಮಿಕೊಂಡಿರುವುದಾಗಿ ಚಿಮುಲ್ ಅಧ್ಯಕ್ಷ ಮಂಜುನಾಥರೆಡ್ಡಿ ಹೇಳಿದರು.

ಚಿಕ್ಕಬಳ್ಳಾಪುರ ಪತ್ರಕರ್ತರ ಭವನದಲ್ಲಿ ಇಂದು ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಪಶು ಆಹಾರ ಪೂರೈಕೆಗೆ ಸಹಕಾರಿಯಾಗುವ ಉದ್ಧೇಶದಿಂದ ಸಾದಲಿಯಲ್ಲಿದ್ದ ಚಿಮುಲ್‌ಗೆ ಸೇರಿ 25 ಎಕರೆ ಜಮೀನು ಕೆಎಂಎಫ್‌ಗೆ ನೀಡಿ ಅಲ್ಲಿ ಪಶು ಆಹಾರ ಘಟಕ ಸ್ಥಾಪಿಸಲು ತೀರ್ಮಾನಿಸಲಾಯಿತು. ಆದರೆ ಕೆಎಂಎಫ್ ಪಶು ಆಹಾರ ಘಟಕ ಮಾಡುವ ಬದಲು ಖಾಸಗಿ ಸಹಭಾಗಿತ್ವದಲ್ಲಿ ಪಶು ಆಹಾರ ತಯಾರಿಕಾ ಘಟಕ ಮಾಡಿ, ಆಂಧ್ರ ಮೂಲದ ವ್ಯಕ್ತಿಯೊಬ್ಬರಿಗೆ ಗುತ್ತಿಗೆ ನೀಡಿದರು. ಇಲ್ಲಿ ಪಶು ಆಹಾರ ಕಳಪೆ ಗುಣಮಟ್ಟದಲ್ಲಿ ತಯಾರಿಸುತ್ತಿರುವ ಬಗ್ಗೆ ಆರಂಭದಲ್ಲಿಯೇ ಕಂಡು ಹಿಡಿದು, ವಿರೋಧ ಮಾಡಲಾಯಿತು. ಆದರೆ ಕೆಎಂಎಫ್ ಯಾವುದೇ ಕ್ರಮ ವಹಿಸಲಿಲ್ಲ. ಜೊತೆಗೆ ಕೆಲ ದಿನಗಳು ಗುಣಮಟ್ಟ ಕಾಪಾಡಿ, ನಂತರ ಯಥಾಸ್ಥಿತಿ ಮುಂದುವರಿಯುತ್ತಿದೆ ಎಂದರು.

ಪಶು ಆಹಾರದಲ್ಲಿ ಎಂ ಸ್ಯಾಂಡ್ ಮಿಶ್ರಣ ಮಾಡಿರುವ ಆರೋಪಗಳಿದ್ದು, ನಾವು ಪರಿಶೀಲಿಸಿದಾಗ ಅದು ದೃಢಪಟ್ಟಿರುತ್ತದೆ. ಈ ಬಗ್ಗೆ ಪಶು ಆಹಾರ ತಯಾರಿಕಾ ಘಟಕದ ಮಾಲೀಕರ ಗಮನಕ್ಕೆ ತಂದರೂ ನಿರ್ಲಕ್ಷ್ಯ ತೋರಿದ್ದಾರೆ. ಹಾಗಾಗಿ ಹೈನು ರೈತರ ಜೀವನ ಮತ್ತು ರಾಸುಗಳ ಜೀವದೊಂದಿಗೆ ಚೆಲ್ಲಾಟವಾಡುತ್ತಿರುವ ಪಶು ಆಹಾರ ತಯಾರಿಕಾ ಘಟಕದ ಮಾಲೀಕರ ಕ್ರಮ ಖಂಡಿಸಿ ಶಿಡ್ಲಘಟ್ಟ ತಾಲೂಕಿನ ಸಾದಲಿ ಗ್ರಾಮದಲ್ಲಿರುವ ಪಶು ಆಹಾರ ತಯಾರಿಕಾ ಘಟಕದ ಮುಂದೆ ಚಿಮುಲ್ ನಿರ್ದೇಶಕರು, ಜಿಲ್ಲೆಯ ಹಾಲು ಡೇರಿ ಚುನಾಯಿತ ಪ್ರತಿನಿಧಿಗಳು ಬೃಹತ್ ಪ್ರತಿಭಟನೆ ಹಮ್ಮಿಕೊಂಡು, ಸರ್ಕಾರದ ಗಮನ ಸೆಳೆಯುವ ಯತ್ನ ಮಾಡುತ್ತಿರುವುದಾಗಿ ಅವರು ಹೇಳಿದರು.

ಅಲ್ಲದೆ ಕೇವಲ ಪಶು ಆಹಾರ ತಯಾರಿಕೆಗಾಗಿ ಚಿಮುಲ್‌ನ 25 ಎಕರೆ ಭೂಮಿಯನ್ನು ಕೆಎಂಎಫ್‌ಗೆ ನೀಡಿದ್ದು, ಅವರು ಖಾಸಗಿ ಸಹಭಾಗಿತ್ವದಲ್ಲಿ ಪಶು ಆಹಾರ ತಯಾರಿಕಾ ಘಟಕ ಮಾಡುವ ಜೊತೆಗೆ, ಅದೇ ಜಾಗದಲ್ಲಿಯೇ ಕೋಳಿ ಆಹಾರ ತಯಾರಿಕಾ ಘಟಕವನ್ನೂ ಮಾಡಿಕೊಂಡು, ನಿಯಮಗಳನ್ನು ಗಾಳಿಗೆ ತೂರಿದ್ದಾರೆ. ಈ ಸಂಬಂಧ ಸರ್ಕಾರಕ್ಕೆ ಮತ್ತು ಕೆಎಂಎಫ್‌ಗೆ ದೂರು ಸಲ್ಲಿಸಿದ್ದರೂ ಈವರೆಗೆ ಯಾವುದೇ ಕ್ರಮ ಇಲ್ಲ. ಹಾಗಾಗಿ ಕೂಡಲೇ ಖಾಸಗಿ ಸಹಭಾಗಿತ್ವವನ್ನು ರದ್ದು ಮಾಡಿ, ಕೂಡಲೇ ಕೆಎಂಎಫ್‌ನಿಂದಲೇ ಪಶು ಆಹಾರ ತಯಾರಿಸಬೇಕು, ಅದರಲ್ಲೂ ಗುಣಮಟ್ಟದ ಆಹಾರ ಪೂರೈಸಲು ತಕ್ಷಣದಿಂದಲೇ ಕ್ರಮ ವಹಿಸಬೇಕು ಎಂದು ಆಗ್ರಹಿಸಿ, ನಾಳೆ ಸಾದಲಿ ಗ್ರಾಮದ ಪಶು ಆಹಾರ ತಯಾರಿಕಾ ಘಟಕದ ಮುಂದೆ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿರುವುದಾಗಿ ಅವರು ಹೇಳಿದರು.

ಚಿಮುಲ್ ನಿರ್ದೇಶಕ ಕೆ.ವಿ. ನಾಗರಾಜ್ ಮಾತನಾಡಿ, ಆಂಧ್ರ ಮೂಲದ ಪಶು ಆಹಾರ ತಯಾರಿಕಾ ಘಟಕದ ಮಾಲೀಕರು ರೈತರ ಬಗ್ಗೆ ಕನಿಷ್ಠ ಕಾಳಡಿಯೂ ಇಲ್ಲದೆ ಪಶು ಆಹಾರವನ್ನು ಕಳಪೆ ಗುಣಮಟ್ಟದಲ್ಲಿ ತಯಾರಿಸುತ್ತಿದ್ದಾರೆ. ಅಲ್ಲದೆ ಪಶು ಆಹಾರ ತಯಾರಿಕಾ ಘಟಕದಲ್ಲಿಯೇ ಕೋಳಿ ಆಹಾರ ತಯಾರಿಸಿ, ನಿಯಮಗಳನ್ನು ಗಾಳಿಗೆ ತೂರಿದ್ದಾರೆ. ಇವರ ಕ್ರಮ ಖಂಡಿಸಿ, ನಾಳೆ ಪ್ರತಿಭಟನೆ ಹಮ್ಮಿಕೊಂಡಿದ್ದು, ಹೈನು ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಪ್ರತಿಭಟನೆ ಯಶಸ್ವಿ ಮಾಡಬೇಕು ಮತ್ತು ಸರ್ಕಾರ ಕೂಡಲೇ ಇತ್ತ ಗಮನ ಹರಿಸಿ ಮಾಲೀಕರ ವಿರುದ್ಧ ಕ್ರಮ ಜರುಗಿಸಿ, ಕೆಎಂಎಫ್‌ನಿಂದಲೇ ಪಶು ಆಹಾರ ತಯಾರಿಸಬೇಕು ಎಂದು ಒತ್ತಾಯಿಸಿದರು.

# ಗೃಹಜ್ಯೋತಿ ಸಮೀಕ್ಷೆ-ಅ.31ರವರೆಗೆ ಅವಧಿ ವಿಸ್ತರಣೆ

**ಸ್ಕಂದಗಿರಿ ವಾಣಿ ಸುದ್ದಿಜಾಲ**
**ಚಿಕ್ಕಬಳ್ಳಾಪುರ:** ಚಿಕ್ಕಬಳ್ಳಾಪುರ ಮತ್ತು ಚಿಂತಾಮಣಿ ವಿಭಾಗ ಬೆವಿಕಂ, ಕಾರ್ಯನಿರ್ವಾಹಕ ಇಂಜಿನಿಯರ್ ವಿ. ರವರಗಳು ಮನವಿ ಮಾಡಿಕೊಳ್ಳುವುದೇನೆಂದರೆ, ಬೆಸ್ಕಾಂ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಗೃಹಜ್ಯೋತಿ ಫಲಾನುಭವಿಗಳ ಮನೆ-ಮನೆ ಸಮೀಕ್ಷೆ ಸಂದರ್ಭದಲ್ಲಿ ಮನೆಗೆ ಬೀಗ ಹಾಕಿರುವ, ಮನೆ ಖಾಲಿ ಇರುವ ಹಾಗೂ ಸಮೀಕ್ಷೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದ ಗ್ರಾಹಕರು ಅಕ್ಟೋಬರ್ 31ರೊಳಗೆ ಹತ್ತಿರದ ಬೆಸ್ಕಾಂ ಕಚೇರಿಗೆ ಖುದ್ದಾಗಿ ತೆರಳಿ ದಾಖಲೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಗೃಹಜ್ಯೋತಿ ಸಮೀಕ್ಷೆ ಅವಧಿಯನ್ನು ಅಕ್ಟೋಬರ್ 31 ರವರೆಗೆ ವಿಸ್ತರಿಸಿ ರಾಜ್ಯ ಸರ್ಕಾರ ಈಗಾಗಲೇ ಆದೇಶ ಹೊರಡಿಸಿದೆ. ಸಮೀಕ್ಷೆ ಸಂದರ್ಭದಲ್ಲಿ ಬೆಸ್ಕಾಂ ವ್ಯಾಪ್ತಿಯಲ್ಲಿ 16.09 ಲಕ್ಷ ಮನೆಗೆ ಬೀಗ ಹಾಕಿರುವ ಮನೆಗಳು ಹಾಗೂ 28,519 ಖಾಲಿ ಇರುವ ಮನೆಗಳನ್ನು ಗುರುತಿಸಲಾಗಿದ್ದು, ಈ ಗ್ರಾಹಕರಿಗೆ ಒಂದು ಬಾರಿ ಅವಕಾಶ ಕಲ್ಪಿಸುವ ಸಲುವಾಗಿ ಈ ತಿಂಗಳ 31 ರೊಳಗೆ ಖುದ್ದು ಬೆಸ್ಕಾಂ ಉಪವಿಭಾಗ ಕಚೇರಿಗೆ ಬಂದು ದಾಖಲೆ ಸಲ್ಲಿಸಲು ವಿನಂತಿಸಲಾಗಿದ್ದು, ದಾಖಲೆಗಳ ಪರಿಶೀಲನೆಗೆ ಇದು ಕೊನೆಯ ಅವಕಾಶವಾಗಿದೆ ಎಂದು ಚಿಕ್ಕಬಳ್ಳಾಪುರ ಬೆವಿಕಂ, ಕಾರ್ಯನಿರ್ವಾಹಕ ಇಂಜಿನಿಯರ್ ಪಿ.ಜಿ.ರಮೇಶ್ ಕುಮಾರ್ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಶ್ವಮಾನವ ಸಂದೇಶವೇ ಸಾರ್ಥಕ ಬದುಕಿಗೆ ದಾರಿ

## ಬಾಗೇಪಲ್ಲಿಯಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪ್ರಮೀಳಾ ಮಹಾದೇವ್



**ಸ್ಕಂದಗಿರಿ ವಾಣಿ ಸುದ್ದಿಜಾಲ**
**ಭಾಗ್ಯನಗರ:** ಕುವೆಂಪು ರವರ ವಿಶ್ವ ಮಾನವ ಸಂದೇಶದಂತೆ ಬದುಕಿದರೆ ಜೀವನ ಸಾರ್ಥಕ ಎಂದು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಾಹಿತಿ ಎಂ.ಪ್ರಮೀಳ ಮಹಾದೇವ್‌ತಿಳಿಸಿದರು.

ಬಾಗೇಪಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದ ಸಾಂಸ್ಕೃತಿಕ, ಕ್ರೀಡಾ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಪಾಲ್ಗೊಳ್ಳುವಂತಹ ವಿದ್ಯಾರ್ಥಿಗಳಿಗೆ ಸ್ವಾಭಾವಿಕವಾಗಿ ಶ್ರಮದಾನ ಭಾವೈಕ್ಯತೆ, ರಾಷ್ಟ್ರೀಯ ಪ್ರೇಮ ಹಾಗೂ ನಾಯಕತ್ವದ ಗುಣಗಳು ಮೇಳೈಸಿ ಬರುತ್ತವೆ. ಇಂತಹ ಪಠ್ಯೇತರ ಚಟುವಟಿಕೆಗಳಿಂದಾಗಿ ಮುಂದಿನ ಜೀವನದಲ್ಲಿ ಸರ್ಕಾರಿ ಉದ್ಯೋಗ ಅವಕಾಶಗಳಲ್ಲೂ ಕೂಡ ಆದ್ಯತೆ ದೊರೆಯುತ್ತದೆ.

ಈ ನಾಡಿನ ಯುವಜನತೆಯಾದ ವಿದ್ಯಾರ್ಥಿ ವೃಂದವು ಪರಿಸರದ ಸಂರಕ್ಷಣೆಯಲ್ಲಿ ತೊಡಗಿಕೊಳ್ಳಬೇಕು. ಜೊತೆಗೆ ತಂದೆ ತಾಯಿ ಗುರುಗಳಿಗೆ ಗೌರವವನ್ನು ನೀಡಬೇಕು ಬದುಕಿನಲ್ಲಿ ಎಂತಹ ಕಷ್ಟದ ಪರಿಸ್ಥಿತಿಗಳು ಬಂದರೂ ಎದುರಿಸಿ ನಿಲ್ಲುವಂತಹ ಮನೋಸ್ಥೈರ್ಯವನ್ನು ಬೆಳೆಸಿಕೊಳ್ಳಬೇಕು.

ಹೃದಯದಲ್ಲಿ ಮಾನವೀಯತೆಯನ್ನು ತುಂಬಿಕೊಳ್ಳಬೇಕು, ಶಿಕ್ಷಣ ಎಂದರೆ ಒಬ್ಬ ವ್ಯಕ್ತಿಯ ಬದುಕಿಗೆ ಒಳ್ಳೆಯ ವಿಚಾರಗಳನ್ನು, ಸುಜ್ಞಾನವನ್ನ ತುಂಬುವುದಾಗಿದೆ. ಈ ದಿಸೆಯಲ್ಲಿ ವಿದ್ಯಾರ್ಥಿಗಳು ಜಾತಿ ಇಲ್ಲದ ಜ್ಯೋತಿಗಳಾಗಿ ಸಮಾಜವನ್ನು ಬೆಳಗುವುದರ ಜೊತೆಗೆ ವಿದ್ಯಾದದಾತಿ ವಿನಯಂ ಎಂಬಂತೆ ಅತ್ಯುತ್ತಮ ಸ್ಥಾನವನ್ನು ಹೊಂದಲು ವಿಧೇಯತೆಯನ್ನು ಮೈಗೂಡಿಸಿಕೊಳ್ಳಬೇಕು, ಗರಿಕೆ ಹುಲ್ಲಿನಂತೆ ಭಾಗ ಬೇಕು, ಹಣ್ಣು, ಹೂ ತೆನೆಗಳಿಂದ ತುಂಬಿರುವ ಗಿಡಮರಗಳಂತೆ ಭೂಮಿಯೆಡೆಗೆ ಬಾಗಿ ನಡೆಯಬೇಕು ಬೀಗಬಾರದು ಎಂದು ತಿಳಿಸಿದರು.

ಮನುಷ್ಯರಾದ ನಾವುಗಳು ಮನುಷ್ಯ ಮನುಷ್ಯರ ನಡುವೆ ಹಾಗೂ ಮನಸು ಮನಸುಗಳ ನಡುವೆ ಪ್ರೀತಿಯ ಸೇತುವೆಯನ್ನು ಕಟ್ಟೋಣ ಎಂದು ವಿದ್ಯಾರ್ಥಿಗಳಿಗೆ ಹಿತವಚನ ನೀಡಿದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲರಾದ ಡಾ.ನಾಗರಾಜು ಹೆಚ್.ಆರ್. ಅವರು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಬೌದ್ಧಿಕ ಮತ್ತು ಮಾನಸಿಕ ಬೆಳವಣಿಗೆಗೆ ಸಹಕಾರಿಯಾಗುವಂತ ಇಂಥ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಹೇಳಿದರು.

ಅದೇ ರೀತಿಯಾಗಿ ಮಾನವೀಯ ಮೌಲ್ಯಗಳನ್ನು ರೂಡಿಸಿಕೊಳ್ಳಬೇಕಾ ನಿಮ್ಮ ಸಾಧನೆಯ ಮೂಲಕ ಕಾಲೇಜಿಗೂ ಹೆತ್ತವರಿಗೂ ಕೀರ್ತಿಯನ್ನು ತರುವಂತವರಾಗಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಇಂಗ್ಲೀಷ್ ವಿಭಾಗದ ಮುಖ್ಯಸ್ಥ ಪ್ರೊ.ಮಂಜುನಾಥ್ .ಬಿ, ಕನ್ನಡ ವಿಭಾಗದ ಮುಖ್ಯಸ್ಥೆ ತಾಜುನ್ನಿಸ, ಡಾ.ಪಂಚಾಂಗಂ ಹರಿಕುಮಾರ್, ಉಪನ್ಯಾಸಕರಾದ ಮುನಿಕೃಷ್ಣಪ್ಪ, ಮುರಳಿ, ಆನಂದ್, ಶಾರದಮ್ಮ, ಡಾ.ಶೃತಿ, ಡಾ.ಪೂರ್ಣಿಮ ಕುವರ್, ಡಾ.ಪ್ರವೀಣ್ ಇದ್ದರು.

# ಕಾವೇರಿದ ಪದವೀಧರ ಕ್ಷೇತ್ರದ ಚುನಾವಣೆ

## ಎನ್‌ಡಿಎ ಅಭ್ಯರ್ಥಿ ಪರ ಘಟಾನುಘಟಿ ನಾಯಕರ ಪ್ರಚಾರ




**ಸ್ಕಂದಗಿರಿ ವಾಣಿ ಸುದ್ದಿಜಾಲ**
**ಚಿಕ್ಕಬಳ್ಳಾಪುರ:** ಅಗ್ನೇಯ ಪದವೀಧರ ಕ್ಷೇತ್ರದ ಚುನಾವಣಾ ಕಣ ದಿನದಿಂದ ದಿನಕ್ಕೆ ರಂಗೇರುತ್ತಿದೆ. ಪದವೀಧರ ಮತದಾರರನ್ನು ಸೆಳೆಯಲು ರಾಜಕೀಯ ಪಕ್ಷಗಳು ಭರ್ಜರಿ ಪ್ರಚಾರ ನಡೆಸುತ್ತಿವೆ. ಇದರ ಭಾಗವಾಗಿ ಚಿಕ್ಕಬಳ್ಳಾಪುರ ನಗರದಲ್ಲಿ ನಡೆದ ಚುನಾವಣಾ ಪ್ರಚಾರ ಹಾಗೂ ಮತಯಾಚನೆ ಸಭೆಯಲ್ಲಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಸೇರಿದಂತೆ ರಾಜ್ಯದ ನಾಯಕರು ಭಾಗಿಯಾಗಿ, ಎನ್‌ಡಿಎ ಅಭ್ಯರ್ಥಿ ಪರ ಮತಯಾಚನೆಗೆ ಮುಂದಾದರು.

ಚಿಕ್ಕಬಳ್ಳಾಪುರ ನಗರದ ಖಾಸಗಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಅಗ್ನೇಯ ಪದವೀಧರ ಕ್ಷೇತ್ರದ ಚುನಾವಣಾ ಪ್ರಚಾರ ಹಾಗೂ ಮತಯಾಚನೆ ಸಭೆಗೆ ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಲಾಯಿತು.

ಸಭೆಯಲ್ಲಿ ರಾಜ್ಯದ ಪ್ರಮುಖ ನಾಯಕರು ಭಾಗವಹಿಸಿ, ಚುನಾವಣಾ ಪ್ರಚಾರದ ಕುರಿತು ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಸಮಾಲೋಚನೆ ನಡೆಸಿದರು.

ಇನ್ನು ಎನ್‌ಡಿಎ ಅಭ್ಯರ್ಥಿಯ ಗೆಲುವಿಗೆ ಪದವೀಧರ ಮತದಾರರ ಬೆಂಬಲ ಅಗತ್ಯವಾಗಿದ್ದು, ಅಭ್ಯರ್ಥಿ ಪರ ಮತಯಾಚನೆ ನಡೆಸುವ ಮೂಲಕ ಚುನಾವಣಾ ಅಖಾಡದಲ್ಲಿ ಮೈತ್ರಿ ನಾಯಕರು ತಮ್ಮ ಬಲ ಪ್ರದರ್ಶಿಸಿದರು.

ಸಭೆಯಲ್ಲಿ ಹೆಚ್.ಡಿ. ಕುಮಾರಸ್ವಾಮಿ ಸೇರಿದಂತೆ ಹಲವು ನಾಯಕರು ಭಾಗವಹಿಸಿದ್ದು, ಪದವೀಧರ ಕ್ಷೇತ್ರದ ಚುನಾವಣೆ ರಾಜಕೀಯ ವಲಯದಲ್ಲಿ ಮತ್ತಷ್ಟು ಕುತೂಹಲವನ್ನು ಮೂಡಿಸಿದೆ.

# ಮುದ್ದೇನಹಳ್ಳಿಯಲ್ಲಿ ಉಚಿತ ಆರೋಗ್ಯ ಸೇವೆಗೆ ಮೆಚ್ಚುಗೆ

## ಆರ್ಥಿಕ ಶೈಕ್ಷಣಿಕ ಅಸಮಾನತೆ ನಿವಾರಣೆ ಅಗತ್ಯ: ಡಾ.ಮೋಹನ್ ಆಳ್ವ

**ಸ್ಕಂದಗಿರಿ ವಾಣಿ ಸುದ್ದಿಜಾಲ**
**ಚಿಕ್ಕಬಳ್ಳಾಪುರ:** ಅಪಾರ ಯುವ ಸಂಪತ್ತು ಹೊಂದಿರುವ ಭಾರತದಲ್ಲಿ ಆರ್ಥಿಕ ಮತ್ತು ಶೈಕ್ಷಣಿಕ ಅಸಮಾನತೆಯ ಕಂದಕವನ್ನು ನಿವಾರಿಸುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಮೋಹನ್ ಆಳ್ವ ಹೇಳಿದರು.

ಮುದ್ದೇನಹಳ್ಳಿಯ ಸತ್ಯ ಸಾಯಿ ಗ್ರಾಮದಲ್ಲಿ ನಡೆಯುತ್ತಿರುವ ನವರಾತ್ರಿ ಉತ್ಸವದ ಆರನೇ ದಿನದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಭಾರತದಷ್ಟು ಬೃಹತ್ ಯುವ ಸಂಪತ್ತನ್ನು ಹೊಂದಿರುವ ದೇಶಗಳು ವಿರಳ. ದೇಶದಲ್ಲಿ 1,500 ವಿಶ್ವವಿದ್ಯಾಲಯಗಳು ಹಾಗೂ 50 ಸಾವಿರಕ್ಕೂ ಅಧಿಕ ಕಾಲೇಜುಗಳಿದ್ದು, 52 ಕೋಟಿ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಇಷ್ಟೊಂದು ದೊಡ್ಡ ಯುವಶಕ್ತಿಯಿದ್ದರೂ ಸಮಾಜದಲ್ಲಿನ ಅಸಮಾನತೆಯನ್ನು ನಿವಾರಿಸಲು ಸಾಧ್ಯವಾಗದಿರುವುದು ವಿಷಾದನೀಯ ಎಂದು ಹೇಳಿದರು.

ಆರ್ಥಿಕ ಮತ್ತು ಶೈಕ್ಷಣಿಕ ಅಸಮಾನತೆಯನ್ನು ತೊಡೆದುಹಾಕಲು ಸದ್ಗುರು ಶ್ರೀ ಮಧುಸೂದನ ಸಾಯಿ ಅವರು ನಡೆಸುತ್ತಿರುವ ಪ್ರಯತ್ನಗಳು ಶ್ಲಾಘನೀಯ. ಸಮಾಜದಲ್ಲಿನ ಸಮಸ್ಯೆಗಳನ್ನು ಕಂಡೂ ಕಾಣದಂತೆ, ಕೇಳಿಯೂ ಕೇಳದಂತೆ ಇರಬಾರದು. ಸಾಮಾಜಿಕ ಕಂದಕವನ್ನು ನಿವಾರಿಸುವ ಹೊಣೆಗಾರಿಕೆ ಪ್ರತಿಯೊಬ್ಬರ ಮೇಲಿದೆ ಎಂದು ಅಭಿಪ್ರಾಯಪಟ್ಟರು.

ಆರೋಗ್ಯ ಕ್ಷೇತ್ರ ಇಂದು ದೊಡ್ಡ ವ್ಯಾಪಾರದ ಕೇಂದ್ರವಾಗುತ್ತಿರುವುದು ಕಳವಳಕಾರಿ. ಚಿಕಿತ್ಸೆಯ ಹೆಸರಿನಲ್ಲಿ ಜನರಿಂದ ಅಪಾರ ಹಣ ವಸೂಲಿ ಮಾಡಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ಮುದ್ದೇನಹಳ್ಳಿಯ ಆಸ್ಪತ್ರೆಯಲ್ಲಿ ಬಡವರಿಗೆ ಉಚಿತವಾಗಿ ಆರೋಗ್ಯ ಸೇವೆ ಒದಗಿಸುತ್ತಿರುವುದು ಮಹತ್ವದ ಕಾರ್ಯ. ಇದಕ್ಕಿಂತ ದೊಡ್ಡ ಸಮಾಜಸೇವೆ ಮತ್ತೊಂದಿಲ್ಲ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಶಿಕ್ಷಣದಲ್ಲಿ ಪರಾ ವಿದ್ಯೆಗೂ ಆದ್ಯತೆ ಅಗತ್ಯ: ಸದ್ಗುರು ವಿದ್ಯಾದಾನ ಕೇವಲ ಸರ್ಕಾರದ ಹೊಣೆಗಾರಿಕೆಯಲ್ಲ. ಧಾರ್ಮಿಕ ಸಂಸ್ಥೆಗಳು, ಮಠಗಳು ಹಾಗೂ ವಿವಿಧ ಸಂಘಟನೆಗಳೂ ಶಿಕ್ಷಣದ ವಿಸ್ತರಣೆಗೆ ಕೈಜೋಡಿಸಬೇಕು ಎಂದು ಒನ್ ವರ್ಲ್ಡ್ ಒನ್ ಫ್ಯಾಮಿಲಿ ಮಿಷನ್ ಸಂಸ್ಥಾಪಕ ಸದ್ಗುರು ಶ್ರೀ ಮಧುಸೂದನ ಸಾಯಿ ಹೇಳಿದರು.

ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದರೂ, ಶಿಕ್ಷಣ ಕೇವಲ ಲೌಕಿಕ ಜ್ಞಾನಕ್ಕೆ ಸೀಮಿತವಾಗಬಾರದು. ಭಾರತೀಯ ಮೌಲ್ಯಗಳು, ಆಧ್ಯಾತ್ಮಿಕತೆ ಮತ್ತು ಧಾರ್ಮಿಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಪರಾ ವಿದ್ಯೆಗೂ ಆದ್ಯತೆ ನೀಡಬೇಕು ಎಂದರು.

ಹಿಂದೆ ಭಾರತೀಯ ಶಿಕ್ಷಣ ಪದ್ಧತಿಯಲ್ಲಿ ಜೀವನ ಮೌಲ್ಯಗಳನ್ನು ಬೋಧಿಸುವುದಕ್ಕೆ ಮಹತ್ವವಿತ್ತು. ನಮ್ಮ ಸಂಸ್ಥೆಯಲ್ಲಿಯೂ ಲೌಕಿಕ ಜ್ಞಾನ ನೀಡುವ ಅಪರಾ ವಿದ್ಯೆಯೊಂದಿಗೆ ಆಧ್ಯಾತ್ಮಿಕ ಹಾಗೂ ಮೌಲ್ಯಾಧಾರಿತ ಶಿಕ್ಷಣವನ್ನು ಒಳಗೊಂಡ ಪರಾ ವಿದ್ಯೆಯನ್ನು ಬೋಧಿಸಲಾಗುತ್ತಿದೆ ಎಂದು ತಿಳಿಸಿದರು.

ಸಾಂಸ್ಕೃತಿಕ ಕ್ಷೇತ್ರದಲ್ಲಿ ವಿಶಿಷ್ಟ ಕೊಡುಗೆ ನೀಡುತ್ತಿರುವ ಆಳ್ವಾಸ್ ಶಿಕ್ಷಣ ಸಂಸ್ಥೆಯ ಕಾರ್ಯವನ್ನು ಶ್ಲಾಘಿಸಿದ ಸದ್ಗುರು, ಪ್ರತಿಯೊಂದು ಸಾಂಸ್ಕೃತಿಕ ಕಲೆಯ ಹಿಂದೆಯೂ ಆಧ್ಯಾತ್ಮಿಕ ತತ್ವ ಅಡಗಿದೆ. ಭಾರತೀಯ ನೃತ್ಯ, ಸಂಗೀತ ಮತ್ತು ಚಿತ್ರಕಲೆಗಳಲ್ಲಿರುವ ಆಧ್ಯಾತ್ಮಿಕ ನೆಲೆಯನ್ನು ಗುರುತಿಸಿ, ಮುಂದಿನ ಪೀಳಿಗೆಗೆ ಪರಿಚಯಿಸಬೇಕು ಎಂದು ಹೇಳಿದರು.

ವಿವೇಚನೆ ಬೆಳೆಸಲು ಸರಸ್ವತಿಯ ಅನುಗ್ರಹ ಅಗತ್ಯ ಶೃಂಗೇರಿಯ ಋತ್ವಿಕರ ತಂಡದ ವತಿಯಿಂದ ಶುಕ್ರವಾರ ಮೇಧಾ ದಕ್ಷಿಣಾಮೂರ್ತಿ ಯಾಗ ಹಾಗೂ ಸರಸ್ವತಿ ಪೂಜೆ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಋತ್ವಿಜ ವಿದ್ವಾನ್ ವಿಕ್ರಮ್ ಭಟ್, ವಿವೇಚನಾಶಕ್ತಿಯನ್ನು ಕಳೆದುಕೊಂಡರೆ ಮಾನವ ಜನ್ಮದ ಸಾರ್ಥಕತೆ ಕುಂದುತ್ತದೆ. ಮನುಷ್ಯನಲ್ಲಿನ ಜಡತ್ವವನ್ನು ದೂರಮಾಡಿ, ವಿವೇಕವನ್ನು ಜಾಗೃತಗೊಳಿಸಲು ಸರಸ್ವತಿ ಮಾತೆಯ ಅನುಗ್ರಹ ಅಗತ್ಯ ಎಂದರು.

ಚಿತ್ತಕೋಶದಲ್ಲಿ ವ್ಯಾಪಕವಾಗಿ ನೆಲೆಸಿರುವ ಕಾತ್ಯಾಯನಿ ಮಾತೆಯ ಆರಾಧನೆಯ ಮಹತ್ವವನ್ನು ವಿವರಿಸಿದ ಅವರು, ಜ್ಞಾನ ಮತ್ತು ಅನ್ವೇಷಣೆಯ ಹಾದಿಯಲ್ಲಿ ಶಕ್ತಿ ನೀಡುವ ಮೇಧಾ ದಕ್ಷಿಣಾಮೂರ್ತಿ ಯಾಗದ ಮಹತ್ವವನ್ನೂ ತಿಳಿಸಿದರು.

ವೇದಿಕೆಯಲ್ಲಿ ಪ್ರಶಾಂತಿ ಬಾಲಮಂದಿರ ಟ್ರಸ್ಟ್ ಅಧ್ಯಕ್ಷ ಬಿ.ಎನ್.ನರಸಿಂಹ ಮೂರ್ತಿ ಉಪಸ್ಥಿತರಿದ್ದರು.

Printed by PRABHAKR G., Printed at M/s. SAI PRINTS, # 8, Subramanya Lane, Cottonpet, Bengaluru, Karnataka - 560053
Published by Smt. LAKSHMINARASAMMA, Owned by Smt. LAKSHMINARASAMMA,
Published at : Varalakonda Village, Somenahalli Hobli, Gudibande Taluk, Chikkaballapur Dist-562104, Karnataka. Editor SHIVAKUMAR K. Mobile: 8147582389 / 9743641515